ನಿಮ್ಮ ನಂಬಿಕೆಯ ಧ್ವನಿ
# ಧೈರ್ಯದ ದಾರಿ
DAIRYADA DAARI NEWS PAPER
EMAIL : dairyadadaari@gmail.com ಸಂಪುಟ: 01 ಸಂಚಿಕೆ: 123
ಬೆಲೆ ರೂ : 2.00
ರಾಯಚೂರು
ಪುಟ: 4
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795 ಮಂಗಳವಾರ: 21–04–2026

## ದಕ್ಷಿಣ ಭಾರತ ರಾಜಕೀಯ ಅಸ್ಮಿತೆ ಅಳಿಸಲು ಭೀಕರ ಸಂಚು: ಬಿಜೆಪಿ ವಿರುದ್ಧ ಡಿಕೆಶಿ ಕಿಡಿ

**ಬೆಂಗಳೂರು, ಏ. 19–** ಕೇಂದ್ರದ ಬಿಜೆಪಿ ಸರ್ಕಾರವು ಮಹಿಳಾ ಸಬಲೀಕರಣದ ಮುಖವಾಡ ಧರಿಸಿ ದಕ್ಷಿಣ ಭಾರತದ ರಾಜಕೀಯ ಅಸ್ಮಿತೆಯನ್ನು ಅಳಿಸಲು 'ಭೀಕರ ಸಂಚು' ರೂಪಿಸಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಬಿಜೆಪಿ ಜಾರಿಗೆ ತರಲು ಹೊರಟಿರುವ ಮಹಿಳಾ ಮೀಸಲಾತಿ ಮಸೂದೆಯು ಕೇವಲ ಒಂದು 'ಮಾಯಾಜಾಲ'ವಾಗಿದ್ದು, ಇದು ದಕ್ಷಿಣದ ರಾಜ್ಯಗಳ ಹಕ್ಕುಗಳನ್ನು ಕಸಿದುಕೊಳ್ಳಲು ನಡೆಸುತ್ತಿರುವ 'ರಾಜಕೀಯ ಸರ್ಜಿಕಲ್ ಸ್ಟೈಕ್' ಎಂದು ಪ್ರಕಟಣೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮಹಿಳೆಯರಿಗೆ ರಾಜಕೀಯ ಅಧಿಕಾರ ಸಿಗಬೇಕು ಎಂಬುದು ಕಾಂಗ್ರೆಸ್ ಪಕ್ಷದ ಅಚಲ ನಿಲುವು. ರಾಜೀವ್ ಗಾಂಧಿಯವರು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ತಂದಾಗ ವಿರೋಧಿಸಿದವರು ಈಗ ಮಹಿಳಾ ಮೀಸಲಾತಿಯ ಜಪ ಮಾಡುತ್ತಿದ್ದಾರೆ. ಆದರೆ, ಈ ಮೀಸಲಾತಿ ಜಾರಿಯಾಗಲು 'ಕ್ಷೇತ್ರ ಮರುವಿಂಗಡಣೆ' ಆಗಲೇಬೇಕು ಎಂಬ ಷರತ್ತು ವಿಧಿಸಿರುವುದು ತರ್ಕಹೀನ ವಾದುದು. ಇದು ಮಹಿಳೆಯರಿಗೆ ತಕ್ಷಣಕ್ಕೆ ನ್ಯಾಯ ಒದಗಿಸುವ ಬದಲು, ಮೀಸಲಾತಿಯನ್ನು ಮುಂದೂಡುವ ಮತ್ತು ಮರುವಿಂಗಡಣೆಯನ್ನು ಬಿಜೆಪಿಯ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಷಡ್ಯಂತ್ರವಾಗಿದೆ ಎಂದು ಕಿಡಿಕಾರಿದ್ದಾರೆ.

ಕ್ಷೇತ್ರ ಮರುವಿಂಗಡಣೆಯಿಂದ ದಕ್ಷಿಣ ಭಾರತಕ್ಕೆ ಅನ್ಯಾಯವನ್ನು ಆಗುತ್ತಿದೆ. ಕರ್ನಾಟಕ, ತಮಿಳುನಾಡು, ಕೇರಳದಂತಹ ರಾಜ್ಯಗಳು ರಾಷ್ಟ್ರೀಯ ಹಿತಾಸಕ್ತಿಯಿಂದ ಜನಸಂಖ್ಯೆಯನ್ನು ಯಶಸ್ವಿಯಾಗಿ ನಿಯಂತ್ರಿಸಿವೆ. ಆದರೆ, ಈಗ ಕೇಂದ್ರ ಸರ್ಕಾರ ಜನಸಂಖ್ಯೆ ಹೆಚ್ಚಿಸಿಕೊಂಡ ರಾಜ್ಯಗಳಿಗೆ ಹೆಚ್ಚಿನ ಸಂಸತ್ ಸ್ಥಾನ ನೀಡಿ, ಜನಸಂಖ್ಯೆ ನಿಯಂತ್ರಿಸಿದ ನಮ್ಮಂತಹ ಪ್ರಗತಿಪರ ರಾಜ್ಯಗಳ ಪ್ರಾತಿನಿಧ್ಯ ಕುಗ್ಗಿಸಲು ಹೊರಟಿದೆ. ಇದು ಕನ್ನಡಿಗರ ಹಾಗೂ ಇಡೀ ದಕ್ಷಿಣ ಭಾರತೀಯರ ಸ್ವಾಭಿಮಾನಕ್ಕೆ ಎಸಗುತ್ತಿರುವ ದ್ರೋಹ ಎಂದು ಅವರು ಕಿಡಿಕಾರಿದ್ದಾರೆ.

ಬಿಜೆಪಿಗೆ ನೇರ ಪ್ರಶ್ನೆಗಳು

1. ಮಹಿಳಾ ಮೀಸಲಾತಿ ನೀಡಲು ಕ್ಷೇತ್ರ ಮರುವಿಂಗಡಣೆ ಆಗಲೇಬೇಕು ಎಂಬ ಹಠವೇಕೆ? ಈಗಿರುವ 543 ಕ್ಷೇತ್ರಗಳಲ್ಲೇ ಮೀಸಲಾತಿ ನೀಡಲು ನಿಮಗಿರುವ ತಡೆಯೇನು?

2. ಜನಸಂಖ್ಯೆ ನಿಯಂತ್ರಿಸಿದ ದಕ್ಷಿಣದ ರಾಜ್ಯಗಳ ಸಂಸತ್ ಸ್ಥಾನಗಳ ಸಂಖ್ಯೆ ಇಳಿಕೆಯಾಗುವುದಿಲ್ಲ ಎಂದು ಕೇಂದ್ರ ಸರ್ಕಾರ ಕಾನೂನಾತ್ಮಕವಾಗಿ ಗ್ಯಾರಂಟಿ ನೀಡುತ್ತದೆಯೇ?

**ರಾಜಿ ಇಲ್ಲದ ಹೋರಾಟ:** ಉತ್ತರ ಭಾರತದ ಹಿಂದಿ ಬೆಲ್ಟ್ ರಾಜ್ಯಗಳಲ್ಲಿ ಸ್ಥಾನಗಳನ್ನು ಹೆಚ್ಚಿಸಿಕೊಂಡು ದಕ್ಷಿಣದ ಧ್ವನಿ ಕ್ಷೀಣಿಸುವಂತೆ ಮಾಡುವುದು ಬಿಜೆಪಿಯ ಗುಪ್ತ ಅಜೆಂಡಾ. ಸಂಸತ್ತಿನಲ್ಲಿ ನಮ್ಮ ಧ್ವನಿ ಕ್ಷೀಣಿಸಿದರೆ ತೆರಿಗೆ ಹಣದ ಹಂಚಿಕೆಯಲ್ಲೂ ನಮಗೆ ಅನ್ಯಾಯವಾಗುತ್ತದೆ. ಇದನ್ನು ಕಾಂಗ್ರೆಸ್ ಪಕ್ಷ ಎಂದಿಗೂ ಒಪ್ಪುವುದಿಲ್ಲ.ನಾವು ಮಹಿಳಾ ಮೀಸಲಾತಿಯನ್ನು ಸ್ವಾಗತಿಸುತ್ತೇವೆ, ಆದರೆ ಅದರ ಹೆಸರಲ್ಲಿ ನಡೆಯುವ ಪ್ರಾದೇಶಿಕ ಅನ್ಯಾಯವನ್ನು ಬಲವಾಗಿ ವಿರೋಧಿಸುತ್ತೇವೆ. ನಮ್ಮ ರಾಜ್ಯದ ಹಿತಾಸಕ್ತಿ ಬಲಿ ಕೊಡಲು ನಾವು ಬಿಡುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಮಹಿಳಾ ಮೀಸಲಾತಿ ಎಂಬುದು ಮಹಿಳೆಯರ ಹಕ್ಕಾಗಬೇಕೇ ಹೊರತು, ದಕ್ಷಿಣ ಭಾರತವನ್ನು ಹತ್ತಿಕ್ಕುವ ಆಯುಧವಾಗಬಾರದು. ಒಕ್ಕೂಟ ವ್ಯವಸ್ಥೆಯ ಅಡಿಪಾಯಕ್ಕೆ ಧಕ್ಕೆ ತರುತ್ತಿರುವ ಕೇಂದ್ರ ಸರ್ಕಾರವು ತಕ್ಷಣವೇ ಮರುವಿಂಗಡಣೆಯ ಷರತ್ತನ್ನು ಕೈಬಿಟ್ಟು ಮಹಿಳಾ ಮೀಸಲಾತಿಯನ್ನು ಜಾರಿಗೆ ತರಬೇಕು, ಇಲ್ಲದಿದ್ದರೆ ದಕ್ಷಿಣ ಭಾರತದ ಜನತೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದ್ದಾರೆ.

## ಪಟ್ಟಣ ಪಂಚಾಯತ್‌ನಲ್ಲಿ ಬಸವ ಜಯಂತಿ ಆಚರಣೆ; ವಚನಗಳ ಪಾಲನೆಗೆ ಅಧ್ಯಕ್ಷ ಹಾಜಿ ಚೌದರಿ ಕರೆ



ಧೈರ್ಯದ ದಾರಿ

**ಸಿರುವಾರ:** ಸ್ಥಳೀಯ ಪಟ್ಟಣ ಪಂಚಾಯತ್ ಕಾರ್ಯಾಲಯದಲ್ಲಿ ಜಗಜ್ಯೋತಿ ಬಸವಣ್ಣನವರ ಜಯಂತಿಯನ್ನು ಸೋಮವಾರ ಅತ್ಯಂತ ಸಡಗರ ಹಾಗೂ ಭಕ್ತಿಯಿಂದ ಆಚರಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಲಾಯಿತು. ಸಮಾಜ ಸುಧಾರಕ ಬಸವಣ್ಣನವರ ತತ್ವ ಆದರ್ಶಗಳನ್ನು ಈ ಸಂದರ್ಭದಲ್ಲಿ ಸ್ಮರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದರಿ ಅವರು, "ಬಸವಣ್ಣನವರು ವಿಶ್ವಕ್ಕೆ ನೀಡಿದ ಸಂದೇಶಗಳು ಸಾರ್ವಕಾಲಿಕ ಸತ್ಯಗಳಾಗಿವೆ. ಅವರು ಹಾಕಿಕೊಟ್ಟ ವಚನಗಳ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕಿದೆ," ಎಂದು ತಿಳಿಸಿದರು.

**ಕಾಯಕವೇ ಕೈಲಾಸ:** ಬಸವಣ್ಣನವರ ಪ್ರಮುಖ ತತ್ವವಾದ 'ಕಾಯಕವೇ ಕೈಲಾಸ' ಎಂಬ ಮಾತಿನಂತೆ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಗಳನ್ನು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ನಿರ್ವಹಿಸಬೇಕು. ವಚನಗಳನ್ನು ಕೇವಲ ಓದುವುದಕ್ಕೆ ಸೀಮಿತಗೊಳಿಸದೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

**ಸಮಾನತೆಯ ಸಂದೇಶ:** ಸಮಾಜದಲ್ಲಿದ್ದ ಅಸಮಾನತೆ ಮತ್ತು ಮೂಢನಂಬಿಕೆಗಳನ್ನು ತೊಡೆದುಹಾಕಲು ಬಸವಣ್ಣನವರು ನೀಡಿದ ಕೊಡುಗೆ ಅಪಾರ. ಅವರ ಶ್ರಮ ಮತ್ತು ಆದರ್ಶಗಳನ್ನು ಪ್ರತಿಯೊಬ್ಬರೂ ಸ್ಮರಿಸುತ್ತಾ, ಸಮಾಜದ ಸರ್ವತೋಮುಖ ಪ್ರಗತಿಗಾಗಿ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಹೇಳಿದರು.
ಗೌರವ ನಮನ: "ಬಸವಣ್ಣನವರು ನಮಗಾಗಿ ಬಿಟ್ಟುಹೋಗಿರುವ ವಚನ ಸಾಹಿತ್ಯವು ಬದುಕಿನ ದಾರಿದೀಪವಾಗಿದೆ. ಅವರ ತತ್ವಗಳನ್ನು ಪಾಲಿಸುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ," ಎಂದು ಹಾಜಿ ಚೌದರಿ ಅವರು ಮಾರ್ಮಿಕವಾಗಿ ನುಡಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್‌ನ ವಿವಿಧ ವಾರ್ಡ್‌ಗಳ ಸದಸ್ಯರಾದ. ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷರಾದ ವೈಭೂಪನಗೌಡ. ಹಸೆನಲ್ಲಿ ಸಾಬ್. ಚನ್ನಬಸವ ಗಡ್ಲಾ. ಮೌಲಾಸಾಬ್ ವರ್ಚಸ್. ಮಾರ್ಖಂಡಪ್ಪ. ಇನ್ನಿತರರು ಇದ್ದರು. ಹಾಗೂ ಕಚೇರಿಯ ಸಮಸ್ತ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು, ಬಸವಣ್ಣನವರ ಕ್ರಾಂತಿಕಾರಿ ವಿಚಾರಧಾರೆಗಳನ್ನು ಮೆಲುಕು ಹಾಕಿದರು.

## ತಾಲೂಕು ಆಡಳಿತದಿಂದ ಅದ್ದೂರಿ ಬಸವ ಜಯಂತಿ ಕಾರ್ಯಕ್ರಮ

ಧೈರ್ಯದ ದಾರಿ



**ಮಾನ್ವಿ:** ಪಟ್ಟಣದ ಬಸವ ವೃತ್ತದಲ್ಲಿ ತಾಲೂಕು ಆಡಳಿತದಿಂದ ಹಮ್ಮಿಕೊಂಡ ಬಸವ ಜಯಂತಿ ಕಾರ್ಯಕ್ರಮ ಅಂಗವಾಗಿ ಶ್ರೀ ವಿಶ್ವಗುರು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸುವ ಮೂಲಕ ಬಸವೇಶ್ವರರ ಭಾವಚಿತ್ರ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿ 12 ನೇ ಶತಮಾನದಲ್ಲಿ ಬಸವಣ್ಣನವರು ಅನುಭವ ಮಂಟಪವನ್ನು ಕಟ್ಟುವ ಮೂಲಕ ವಿಶ್ವಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪರಿಚಯಿಸಿದರು. ಸಮಾಜದಲ್ಲಿನ ಎಲ್ಲಾ ಕಾಯಕ ಶರಣರನ್ನು ಅನುಭವ ಮಂಟಪದ ಮೂಲಕ ಒಂದುಗೂಡಿಸಿ ಕಾಯಕ,ಜಂಗಮ ,ದಾಸೋಹದ ಮೂಲಕ ಕಲ್ಯಾಣ ರಾಜ್ಯದ ಪರಿಕಲ್ಪನೆಯನ್ನು ನಮ್ಮಗೆ ನೀಡಿದ್ದಾರೆ. ಬಸವಾದಿ ಶರರಣರ ಅನುಭವದ ಮೂಲಕ ಮೂಡಿದ ವಚನಗಳನ್ನು ನಾವು ಅಧ್ಯಾಯನವನ್ನು ಮಾಡಿ ವಚನಗಳಲ್ಲಿನ ಶರಣತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದು ತಿಳಿಸಿದರು.
ತಹಶೀಲ್ದಾರ್ ಕಚೇರಿ ಆವರಣದಲ್ಲಿನ ವೇದಿಕೆಯು ಕಾರ್ಯಕ್ರಮವನ್ನು ಉದ್ಘಾಟಿಸಿ ಗ್ರೇಡ್–2 ತಹಶೀಲ್ದಾರ್ ಅಬ್ದುಲ್ ವಾಹಿದ್ ಮಾತನಾಡಿ 12 ನೇ ಶತಮಾನದಲ್ಲಿ ಬಸವಣ್ಣನವರು ಸಮಾಜದಲ್ಲಿ ಅನೇಕ ಸುಧಾರಣೆಗಳನ್ನು ತಂದ ಮಹಾನ್ ಸಮಾಜ ಸುಧರಕಾರಾಗಿದ್ದಾರೆ. ಸಮಾಜದಲ್ಲಿ ಸ್ತ್ರೀಯರಿಗೆ ಸಮಾನತೆಯನ್ನು ಕಲ್ಪಿಸುವ ಮೂಲಕ ಮಹಿಳೆಯರಿಗೆ ಸಮಾನ ಸ್ಥಾನಮಾನವನ್ನು ಕಲ್ಪಿಸಿದ್ದರು. ಬಸವಣ್ಣನವರು ಸಮಾಜದ ಅನೇಕ ಮೌಢ್ಯಚಾರಣೆಗಳನ್ನು ಖಂಡಿಸಿದರು. ತಮ್ಮ ವಚನಗಳ ಮೂಲಕ ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದಿದರು. ಸತ್ಯಶುದ್ಧವಾದ ಕಾಯಕದ ಮೂಲಕ ಬಂದ ಹಣವನ್ನು ದಾಸೋಹಕ್ಕಾಗಿ ವಿನಿಯೋಗಿಸುವಂತೆ ಪ್ರತಿಪಾದಿಸಿದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೇಲ್ಲ ನಡೆಯೋಣ ಎಂದು ತಿಳಿಸಿದರು.
ಶರಣಯ್ಯ ಹಿರೇಮಠ ಚೀಕಲಪರ್ವಿ ಶಿಕ್ಷಕರಿಂದ ಬಸವಣ್ಣನವರ ಜೀವನ ಹಾಗೂ ತತ್ವಗಳ ಬಗ್ಗೆ ಉಪನ್ಯಾಸ ನೀಡಿದರು.
ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ತೋರಿದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು. 2ನೇಪುಟಕ್ಕೆ

## ದೀಪೋತ್ಸವ ಜ್ಞಾನದ ಸಂಕೇತ ಶಿಕ್ಷಣದ ಪ್ರತೀಕ – ರಮೇಶಬಾಬು ಯಾಳಗಿ



ಧೈರ್ಯದ ದಾರಿ

**ಮಾನ್ವಿ–** ದೀಪವನ್ನು ಹಚ್ಚುವುದರ ಮೂಲಕ ದೈವಿ ಕೃಪೆಗೆ ಪಾತ್ರರಾಗಿ ನವೊಳ್ಮಗಿನ ಅಜ್ಞಾನ ಕಳೆದುಕೊಂಡು ಸುಶಿಕ್ಷಿತರಾಗಬೇಕು. ದೀಪೋತ್ಸವ ಎಂದರೆ ಜ್ಞಾನದ ಸಂಕೇತ, ಶಿಕ್ಷಣದ ಪ್ರತೀಕ ಎಂದು ಸಾಹಿತಿ ರಮೇಶಬಾಬು ಯಾಳಗಿ ಅವರು ಹೇಳಿದರು.

ಅವರು ಪಟ್ಟಣದ ತೊಗಟವೀರ ಕ್ಷತ್ರಿಯ ಸಮಾಜ 39 ನೆಯ ಚೌಡೇಶ್ವರಿ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ದೀಪೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಮ್ಮ ನಮ್ಮ ಮನಸ್ಸುಗಳು ಬೆಳಗಲು, ಪರಸ್ಪರ ಪ್ರೀತಿ ಹಂಚಲು, ಮೇಲು ಕೀಳು ಭೇದ ಕಳೆಯಲು, ಸಮಾನತೆ ಸಾರಲು ಈ ದೀಪದ ಬೆಳಕಿನಲ್ಲಿ ನಾವೆಲ್ಲ ಬೆಳಗಲು, ಮಹಾಬೆಳಕಾಗಲು ಸೂಕ್ತ ವೇದಿಕೆ ಕಲ್ಪಿಸಿದ ತೊಗಟವೀರ ಕ್ಷತ್ರಿಯ ಸಮಾಜದ ಕಾರ್ಯ ನಿಜಕ್ಕೂ ಶ್ಲಾಘನೀಯ.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಒತ್ತಡದ ಜೀವನ ಕಡಿಮೆ ಮಾಡಿ ಮನಸ್ಸಿಗೆ ಮನರಂಜನೆ ದೊರೆಯುತ್ತದೆ. ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸುತ್ತದೆ, ಮಕ್ಕಳಲ್ಲಿ ಆತ್ಮವಿಶ್ವಾಸ ಅಧಿಕವಾಗಿ ಸ್ಪರ್ಧಾ ಮನೋಭಾವ ಬೆಳೆದು ಸಾಮಾಜಿಕ ವ್ಯಕ್ತಿತ್ವ ನಿರ್ಮಾಣವಾಗುತ್ತದೆ ಎಂದ ಯಾಳಗಿ ಅವರು ಸದ್ಗುಣ ಸಂಪಾದನೆಗಾಗಿ ಶಕ್ತಿಯ ಆರಾಧನೆ ನಾಡಿನಾದ್ಯಂತ ವಿವಿಧ ರೂಪದಲ್ಲಿ ಆಚರಿಸಲಾಗುತ್ತದೆ. ಅಂತಹ ಶಕ್ತಿಯ ಪ್ರತೀಕವಾದ ಚೌಡೇಶ್ವರಿ ದೇವಿಗೆ ನೂತನವಾಗಿ ಶಿಲಾ ಕಟ್ಟಡ ನಿರ್ಮಿಸುತ್ತಿರುವ ಈ ಪುಣ್ಯ ಕಾರ್ಯಕ್ಕೆ ಸರ್ವರು ತನು, ಮನ, ಧನದಿಂದ ಒಂದಿಷ್ಟು ತ್ಯಾಗ ಮಾಡಿದರೆ ಭಗವಂತನಲ್ಲಿ ನಮಗೆ ಜಾಗ ದೊರೆಯುತ್ತದೆ ಎಂದರು.

ತಾಲೂಕಾ ನೇಕಾರ ಸಮುದಾಯ ಒಕ್ಕೂಟದ ಅಧ್ಯಕ್ಷ ಕೆ.ಈ. ನರಸಿಂಹ ಪ್ರಾಸ್ತಾವಿಕ ಮಾತುಗಳನ್ನಾಡಿ ಸಂಘಟನೆಯಿಂದ ಸಮಾಜದ ಅಭಿವೃದ್ಧಿಗೆ ಅಣಿಯಾಗುವುದರ ಜೊತೆಗೆ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಬೇಕು. ನಮ್ಮ ನೇತಾಜಿ ಶಿಕ್ಷಣ ಸಂಸ್ಥೆಯಲ್ಲಿ ನೇಕಾರ ಸಮುದಾಯದ ಮಕ್ಕಳಿಗೆ ನಿಗದಿತ ಶುಲ್ಕದಲ್ಲಿ ಶೇಕಡಾ 50 ರಷ್ಟು ರಿಯಾಯಿತಿ ನೀಡಲಾಗುವುದು ಎಂದು ಘೋಷಣೆ ಮಾಡಿದರು. 2ನೇಪುಟಕ್ಕೆ►

## ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ 15 ನೇ ಪಕ್ಷ ಸಂಸ್ಥಾಪನಾ ದಿನಾಚರಣೆ : ಶೇಖ್ ಫರೀದ್ ಉಮ್ರಿ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಕುಬ್ಬ ಮಸ್ಜಿದ್ ಸಭಾಂಗಣದಲ್ಲಿ ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಮಾನ್ವಿ ವತಿಯಿಂದ ನಡೆದ 15 ನೇ ಪಕ್ಷ ಸಂಸ್ಥಾಪನಾ ದಿನಾಚರಣೆ ಹಾಗೂ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಜಿಲ್ಲಾಧ್ಯಕ್ಷರಾದ ಶೇಖ್ ಫರೀದ್ ಉಮ್ರಿ ಮಾತನಾಡಿ ದೇಶದಲ್ಲಿ ಮೌಲ್ಯಾಧರಿತ,ಭ್ರಷ್ಟಚಾರ ರಹಿತ,ಜನಸೇವೆಯನ್ನೆ ಮುಖ್ಯ ಧ್ಯಾಯವಾಗಿಟ್ಟು ಪರ್ಯಾಯವಾದ ಮೌಲ್ಯಯುತ ರಾಜಕೀಯವನ್ನು ಜನರಿಗೆ ಪರಿಚಯಿಸುವ ಉದ್ದೇಶವನ್ನಿಟ್ಟು ಕೊಂಡು 2011 ರಲ್ಲಿ ದೇಹಲಿಯಲ್ಲಿ ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಪಕ್ಷವನ್ನು ಪ್ರಾರಂಭಿಸಿ ಇಂದಿಗೆ 15 ವರ್ಷಗಳು ಕಳೆದಿದು ದೇಶದ ಕರ್ನಾಟಕ,ಕೇರಳ,ತಮಿಳುನಾಡುರಾಜಸ್ಥಾನ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಪಕ್ಷವು ತಳ ಹಂತದಲ್ಲಿ ಸಂಘಟಿತ ಗೊಂಡಿರುವುದಕ್ಕೆ ಸ್ಥಳಿಯ ಸಂಸ್ಥೆಗಳಿಗೆ ನಡೆದ ಬಹುತೇಕ ಹೆಚ್ಚಿನ ಚುನಾವಣೆಗಳಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳು ಗೇಲುವುಸಾಧಿಸಿ ಉತ್ತಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಸರಕಾರದ ಅಮುದಾನವನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳುವ ಮೂಲಕ ಜನರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಕೋವಿಡ್ ಸಮಯದಲ್ಲಿ ನಮ್ಮ ಪಕ್ಷದ ಸೇವೆ ಅಮೋಘವಾಗಿದು ಜನರಿಗೆ ಉತ್ತಮ ಸೇವೆಗಳು ಸಿಗುವಂತೆ ನೋಡಿಕೊಂಡಿದೇವೆ ಮುಂದಿನ ಚುನಾವಣೆಯಲ್ಲಿ ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಪಕ್ಷದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿಧಾನಸಭಾ ಹಾಗೂ ಲೋಕಸಭಾಕ್ಷೇತ್ರಗಳಲ್ಲಿ ಸ್ಪರ್ಧೆನಡೆಸಲಾಗುವುದು ಎಂದು ತಿಳಿಸಿದರು.
ಪಿ.ಯು.ಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ರಾಜ್ಯ ಮಟ್ಟದ ಉತ್ತಮ ವರದಿಗಾರಿಕೆಗಾಗಿ ಪ್ರಶಸ್ತಿಯನ್ನು ಪಡೆದಿರುವ ಹಿರಿಯ ವರದಿಗಾರ ಪಿ.ಪರಮೇಶ ರವರನ್ನು ಸನ್ಮಾನಿಸಿ ಗೌರವಿಸಲಾಯಿತು.
ಕಾರ್ಯಕ್ರಮದಲ್ಲಿ ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಜಿಲ್ಲಾ ಸಂಚಾಲಕರಾದ ಅಬ್ದುಲ್ ಕಾರಿಂ ಖಾನ್ ಸಾಬ್,ತಾ.ಅಧ್ಯಕ್ಷರಾದ ಶೇಖಬಾಬಾ ಹುಸೇನ್ ಸಾಬ್, ದಾರುಸಲಾಮ್ ಫೌಂಡೇಶನ್ ಅಧ್ಯಕ್ಷರಾದ ಸೈಯಾದ್ ಅಕ್ಬರ್ ಸಾಬ್, ತಾಲೂಕು ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷರಾದ ರಾಜಾ ಸುಭಾಶ್ಚಂದ್ರನಾಯಕ ,ವೆಂಕಟೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಮಹಾಂತೇಶ ಓಲೇಕರ್, ಪಿ.ಪರಮೇಶ, ಜಮಾತೆ ಇಸ್ಲಾಂ ಹಿಂದ್ ಜಿಲ್ಲಾ ಸಂಚಾಲಕರಾದ ಅಬ್ದುಲ್ ಕಾರೀಂಖಾನ್ ಸಾಬ್, ತಾ.ಅಧ್ಯಕ್ಷರಾದ ಅಬ್ದುಲ್ ರೆಹಮಾನ್ ಸಾಬ್, ಗುಲಾಬ್ ಇಮ್ತಿಯಾಬ್ ಸಾಬ್ ವಕೀಲರು, ಮಹಮ್ಮದ್ ಯೂಸೂಫ್ ಸಾಬ್, ,ಎಂ.ಹೆಚ್.ಎಂ. ಮುಖೀಮ್, ಉಮರ್ ಫಾರೂಖ್ ದೇವರಮಾನಿ ಸೇರಿದಂತೆ ಇನ್ನಿತರರು ಇದ್ದರು.

ಮೊದಲನೇ ಪುಟದಿಂದ

# ತಾಲೂಕು ಆಡಳಿತದಿಂದ ಅದ್ದೂರಿ ಬಸವ ಜಯಂತಿ ಕಾರ್ಯಕ್ರಮ

ಪಟ್ಟಣದ ಬಸವವೃತ್ತದಿಂದ ತಹಶೀಲ್ದಾರ್ ಕಚೇರಿಯವರೆಗೆ ಶ್ರೀ ವಿಶ್ವಗುರು ಬಸವೇಶ್ವರರ ಭಾವಚಿತ್ರ ಮೆರವಣಿಗೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ರಾಜಾ ವೆಂಕಟಪ್ಪನಾಯಕ ,ಪಿ.ಐ, ಸೋಮಶೇಖರ ಎಸ್.ಕೆಂಚರೆಡ್ಡಿ,ತಾ.ಆರೋಗ್ಯಧಿಕಾರಿ ಡಾ.ಶರಣಬಸವರಾಜ, ಬಿ.ಸಿ,ಎಂ, ಇಲಾಖೆಯ ಆಧಿಕಾರಿ ಭಾಗಯ್ಯನಾಯಕ.ಅರಣ್ಯ ಇಲಾಖೆಯ ಉಮಕಾಂತ,ಸರಕಾರಿ ನೌಕರರ ತಾ.ಅಧ್ಯಕ್ಷರಾದ ಸುರೇಶಕುರ್ಡಿ, ಸಾರಿಗೆ ಇಲಾಖೆಯ ವ್ಯವಸ್ಥಾಪಕರಾದ ನಾಗರಾಜ , ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶರಣಬಸವ ನೀರಮಾನ್ವಿ, ತಾ.ಬಸವ ಕೇಂದ್ರದ ಅಧ್ಯಕ್ಷರಾದ ಶರಣಬಸವ ಬೆಟ್ಟದೂರು.ಗೌರವಾಧ್ಯಕ್ಷರಾದ ಡಾ.ಬಸವಪ್ರಭುಪಾಟೀಲ್ ಬೆಟ್ಟದೂರು, ತಾಲೂಕು ವೀರಶೈವ ಸಮಾಜದ ಅಧ್ಯಕ್ಷರಾದ ಹರಿಹರಪಾಟೀಲ್,ಗೌರವಧ್ಯಕ್ಷರಾದ ಶ್ರೀಧರಸ್ವಾಮಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾ.ಅಧ್ಯಕ್ಷರಾದ ಅರುಣಚಂದಾ, ರಾಜ್ಯ ಕಾರ್ಯಕಾರಣಿ ಸದಸ್ಯರಾದ ಸಿದ್ದಲಿಂಗಪ್ಪ ವಕೀಲರು. ಗುಮ್ಮ ಬಸವರಾಜ, ವೀರನಗೌಡ ವಕೀಲರು,ಹೆಚ್.ಮೌನೇಶಗೌಡ, ಶರಣಪ್ಪಮೇದಾ ,ಜೆ.ಸುಧಕಾರ್, ದೊರಬಾಬು ಸೇರಿದಂತೆ ಇನ್ನಿತರರು ಇದ್ದರು.

# ದೀಪೋತ್ಸವ ಜ್ಞಾನದ ಸಂಕೇತ ಶಿಕ್ಷಣದ ಪ್ರತೀಕ – ರಮೇಶಬಾಬು ಯಾಳಗಿ

ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷರು ಹಾಗೂ ತಾಲೂಕಾ ತೊಗಟವೀರ ಕ್ಷತ್ರಿಯ ಸಮಾಜದ ಉಪಾಧ್ಯಕ್ಷ ಜಿ. ನಾಗರಾಜ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಸಮಾಜದ ಹಿರಿಯರ ಮಾರ್ಗದರ್ಶನ ಪಡೆದು ಯುವಕರು ಸಕ್ರಿಯವಾಗಿ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಸಂತಸ ತಂದಿದೆ ಎಂದರು.

ತೊಗಟವೀರ ಕ್ಷತ್ರಿಯ ಸಂಘದ ವಿವಿಧ ಪದಾಧಿಕಾರಿಗಳಾದ ಎಚ್.ಟಿ. ದತ್ತಾತ್ರೇಯ, ಹೆಚ್. ಟಿ. ಪ್ರಕಾಶಬಾಬು, ಶ್ರೀನಿವಾಸ್,

ಡಿ. ವೀರೇಶ, ಆರ್ ಸುಭಾಷಚಂದ್ರ, ಯುವಕ ಸಂಘದ ಅಧ್ಯಕ್ಷ ಚೌಡಂ ರಾಜೇಶ್, ಗೌರವಾಧ್ಯಕ್ಷ ವರ ಪ್ರಸಾದ, ಚೌಡೇಶ್ವರಿ ಮಹಿಳಾ ಮಂಡಳಿಯ ಅಧ್ಯಕ್ಷೆ ಅನ್ನಪೂರ್ಣ ಗೂಡ ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪಿರಿಮಳ್ ವೀರೇಶ್ ಸ್ವಾಗತಿಸಿದರು, ಉಪನ್ಯಾಸಕ ಆನಂದ ಉಪ್ಪಳ ನಿರೂಪಿಸಿದರು ಕೆ.ನವೀನ್ ವಂದಿಸಿದರು.

ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

# ಪಟ್ಟಣದ ವಿವಿಧ ವಾರ್ಡಗಳಲ್ಲಿ 5ಕೋಟಿ 26 ಲಕ್ಷ ವೆಚ್ಚದಲ್ಲಿ ಕಾಮಗಾರಿಗಳಿಗೆ ಚಾಲನೆ: ಎನ್.ಎಸ್.ಬೋಸರಾಜು



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಪ್ರವಾಸಿ ಮಂದಿರದಲ್ಲಿ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ ಪಟ್ಟಣದ ವಿವಿಧ ವಾರ್ಡಗಳಲ್ಲಿ 5ಕೋಟಿ 26 ಲಕ್ಷ ವೆಚ್ಚದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಸಮುದಾಯಭವನ ಹಾಗೂ ಲೋಕಪಯೋಗಿ ಇಲಾಖೆಯಿಂದ ರಸ್ತೆ,ಚರಂಡಿ ಕಾಮಗಾರಿಗಳಿಗೆ ಶಾಸಕರೊಂದಿಗೆ ಚಾಲನೆ ನೀಡಲಾಯಿತು. ತಾಲೂಕಿನಲ್ಲಿ ಮಳೆಗಾಲದಲ್ಲಿ ತುಂಬಿ ಹರಿಯುವ ಹಳ್ಳಗಳಿಗೆ ಶಾಶ್ವತವಾದ ಸೇತುವೆಗಳನ್ನು ನಿರ್ಮಿಸುವುದಕ್ಕೆ ರಾಜ್ಯ ಸರಕಾರದಿಂದ ಅನುದಾನವನ್ನು ಮಂಜೂರು ಮಾಡಿಸಲಾಗಿದು ತಾಲೂಕಿನ ಮುಸ್ಟೂರು ಗ್ರಾಮದ ಹತ್ತಿರದ ಹಳ್ಳಕ್ಕೆ ಶಾಶ್ವತವಾದ ಸೇತುವೆಯನ್ನು ನಿರ್ಮಿಸುವುದಕ್ಕಾಗಿ 11 ಕೋಟಿ ಅನುದಾನ ಬಿಡುಗಡೆಯಾಗಿದೆ. ರಾಜ್ಯ ಹೆದ್ದಾರಿ ರಾಮದುರ್ಗ ಮಾರ್ಗದಲ್ಲಿ ಬರುವ ಜೀನೂರು ಹಾಗೂ ತಡಕಲ್ ಮಧ್ಯದ ಹಳ್ಳಕ್ಕೆ ಶಾಶ್ವತವಾದ ಸೇತುವೆಯನ್ನು ನಿರ್ಮಿಸುವುದಕ್ಕಾಗಿ 5ಕೋಟಿ 50ಲಕ್ಷ , ಬಲ್ಲಟಗಿ ಸೇತುವೆ ದುರಸ್ಥಿಗಾಗಿ 50 ಲಕ್ಷ ಅನುದಾನ ಬಿಡುಗಡೆಯಾಗಿದ್ದು ತಾಲೂಕಿನಲ್ಲಿ ಒಟ್ಟು 17 ಕೋಟಿ ವೆಚ್ಚದ ಲೋಕಪಯೋಗಿ ಇಲಾಖೆ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗುವುದು. ತಾಲೂಕಿನಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದು ಜಲಾಶಯದಿಂದ ಕಾಲುವೆ ಮೂಲಕ ತಾಲೂಕಿನ ಎಲ್ಲಾ 18 ಕೆರೆಗಳನ್ನು ತುಂಬಿಸಲಾಗಿದೆ ಮಾನ್ವಿ ಪುರಸಭೆಯಿಂದ ರಬ್ಬಣಕಲ್ ಕೆರೆಯಲ್ಲಿ ಇದುವರೆಗೆ 7.5 ಮೀಟರ್ ವರೆಗೆ ನೀರನ್ನು ಸಂಗ್ರಹಿಸಲಾಗಿದೆ. ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ ಜೆ.ಜೆ.ಎಂ. ಹಾಗೂ ಅಮೃತ –2 ಕಾಮಗಾರಿಯನ್ನು ಕೈಗೊಳ್ಳಾಗಿದು, ಕಾತರಕಿ ಗ್ರಾಮದ ತುಂಗಭದ್ರನದಿಯಲ್ಲಿ ಹೊಸ ಜಾಕ್‌ವೆಲ್ ಹಾಗೂ ಮೋಟರ್ ಗಳನ್ನು ಅಳವಡಿಸಿ ನದಿ ನೀರನ್ನು ಶುದ್ದಿಕಾರಿಸಿ ಪಟ್ಟಣಕ್ಕೆ ಪೂರೈಕೆ ಮಾಡಲಾಗುತ್ತಿದೆ.ಮುಂದಿನ ಬೇಸಿಗೆಗೆ ಕುಡಿಯುವ ನೀರಿನ ಸಮಸ್ಯೆ ಇಲ್ಲಾದಂತೆ ಅಗತ್ಯವಾದ ಪೈಪ್ ಲೈನ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ. ಮುಖ್ಯಮಂತ್ರಿಗಳು ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ ಜಿಲ್ಲಾಧಿಕಾರಿಗಳ ಹಾಗೂ ಜಿ.ಪಂ. ಸಿ.ಇ.ಓ.ಗಳ ಸಭೆಯನ್ನು ಕೂಡ ನಡೆಸಿದ್ದಾರೆ. ಸಿರವಾರ ಮತ್ತು ಕವಿತಾಳ ನಲ್ಲಿ ಕೂಡ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ನ್ಯಾಯಯುತವಾದ ಅನುದಾನ ನೀಡದೆ ಇರುವುದರಿಂದ ರಾಜ್ಯದಲ್ಲಿ ಅಭಿವೃದ್ದಿಗೆ ಸಮಸ್ಯೆಯಾಗುತ್ತಿದೆ ಮನರೇಗಾ ಯೋಜನೆಯಡಿಯಲ್ಲಿ ಕೇಂದ್ರದಿಂದ ರಾಜ್ಯಕ್ಕೆ 6ಸಾವಿರ ಕೋಟಿಬರುತ್ತಿತು ಅದು ನಿಲುಗಡೆಯಾಗಿದೆ. ವಿ,ರಾಮಜೀ ಯೋಜನೆಗೆ ಪರ್ಯಾಯವಾಗಿ ಯೋಜನೆಯನ್ನು ರೂಪಿಸುವುದಕ್ಕೆ ರಾಜ್ಯ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ತಿಳಿಸಿದರು.

ಶಾಸಕ ಹಂಪಯ್ಯನಾಯಕ, ನಯೋಪ್ರ ಅಧ್ಯಕ್ಷ ಅಬ್ದುಲ್ ಗಾಫೂರ್ ಸಾಬ್,ರಾಜಾ ಸುಭಾಶ್ಚಂದ್ರನಾಯಕ,ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ಬಿ.ಕೆ.ಅಂಬರೇಶಪ್ಪ, ಖಾಲಿದ್ ಗುರು ಇದ್ದರು

# ಶ್ರೀ ಚೌಡೇಶ್ವರಿ ದೇವಿಯ 39ನೇಯ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳ ಅಯೋಜನೆ





ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ತೊಗಟವೀರ ಕ್ಷತ್ರಿಯ ಸಮಾಜದ ಶ್ರೀ ಚೌಡೇಶ್ವರಿ ದೇವಿಯ 39ನೇಯ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು ರವಿವಾರ ಬೆಳಿಗ್ಗೆ ಪಟ್ಟಣದ ಜಡೇ ಬಸವೇಶ್ವರ ಗುಡಿಯಿಂದ ಗಂಗೆಯನ್ನು ಶ್ರೀ ಚೌಡೇಶ್ವರಿ ದೇವಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶ್ರೀ ಚೌಡೇಶ್ವರಿ ದೇವಿಯ ದೇವಸ್ಥಾನದವರೆಗೆ ಸುಮಂಗಲಿಯರು ಕಳಸ ಕುಂಭ,ನಂದಿಕೋಲು ಸೇವೆಗಳೊಂದಿಗೆ ಮೆರವಣಿಗೆ ನಡೆಸಲಾಯಿತು ನಂತರ ಪವಿತ್ರ ಜಲದಿಂದ ಶ್ರೀ ಚೌಡೇಶ್ವರಿ ದೇವಿಗೆ ಅಭಿಷೇಕ ಮಾಡಲಾಯಿತು.

ಸಂಜೆ ಶ್ರೀ ಚೌಡೇಶ್ವರಿ ದೇವಿಯ ದೇವಸ್ಥಾನದ ಅವರಣದೊಳಗೆ ತೊಗಟವೀರ ಕ್ಷತ್ರಿಯ ಯುವಕ ಸಂಘದವರಿಂದ ನಡೆದ ಸಹಸ್ರದೀಪೋತ್ಸವ ಕಾರ್ಯಕ್ರಮಕ್ಕೆ ತಾಲೂಕಾ ನೇಕಾರ ಸಮುದಾಯ ಒಕ್ಕೂಟದ ಅಧ್ಯಕ್ಷ ಕೆ.ಈ. ನರಸಿಂಹ ದೀಪವನ್ನು ಬೆಳಗಿಸುವುದರ ಮೂಲಕ ಚಾಲನೆ ನೀಡಿ ಮಾತನಾಡಿ ನೇಕಾರ ಸಮುದಾಯಗಳು ಸಂಘಟಿತರಾದಲ್ಲಿ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಪಾಲಕರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡುವುದಕ್ಕೆ ಹೆಚ್ಚಿನ ಅದ್ಯತೆಯನ್ನು ನೀಡಬೇಕು ತಾಲೂಕಿನ ನೇಕಾರ ಸಮುದಾಯದ ಮಕ್ಕಳಿಗೆ ನಮ್ಮ ನೇತಾಜಿ ಶಿಕ್ಷಣ ಸಂಸ್ಥೆಯಲ್ಲಿ ದಾಖಲಿಸಿದಲ್ಲಿ ಶುಲ್ಕದಲ್ಲಿ ಶೇ50 ರಷ್ಟು ವಿನಾಯಿತಿ ನೀಡಲಾಗುವುದು ಎಂದು ತಿಳಿಸಿದರು.

ಸಾಹಿತಿ ರಮೇಶಬಾಬು ಯಾಳಗಿ ವಿಶೇಷ ಉಪನ್ಯಾಸ ನೀಡಿ ದೀಪೋತ್ಸವ ಎಂದರೆ ಜ್ಞಾನದ ಸಂಕೇತ ನಮ್ಮೊಳಗಿನ ಅಜ್ಞಾನ ಕಳೆದುಕೊಂಡು ಜ್ಞಾನದ ಕಡೆ ನಡೆಯಬೇಕು ದೀಪದ ಬೆಳಕಿನಲ್ಲಿ ನಾವೆಲ್ಲ ಬೆಳಗಬೇಕು ನಮ್ಮಲ್ಲಿ ಸಮಾನತೆ ಮೂಡಬೇಕು ಎಂದು ತಿಳಿಸಿದರು.

ದೀಪೋತ್ಸವದಲ್ಲಿ ಸಾವಿರಾರು ಭಕ್ತರು ಭಕ್ತಿಯಿಂದ ದೀಪವನ್ನು ಬೆಳಗಿದರು. ಶ್ರೀ ಚೌಡೇಶ್ವರಿ ಮಹಿಳಾ ಮಂಡಳಿಯವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷರು ಹಾಗೂ ತಾಲೂಕಾ ತೊಗಟವೀರ ಕ್ಷತ್ರಿಯ ಸಮಾಜದ ಉಪಾಧ್ಯಕ್ಷ ಜಿ. ನಾಗರಾಜ,ತೊಗಟವೀರ ಕ್ಷತ್ರಿಯ ಸಮಾಜದ ಪದಾಧಿಕಾರಿಗಳಾದ ಎಚ್.ಟಿ. ದತ್ತಾತ್ರೇಯ, ಹೆಚ್. ಟಿ. ಪ್ರಕಾಶಬಾಬು, ಶ್ರೀನಿವಾಸ್, ಡಿ. ವೀರೇಶ, ಆರ್ ಸುಭಾಷಚಂದ್ರ, ಯುವಕ ಸಂಘದ ಅಧ್ಯಕ್ಷ ಚೌಡಂ ರಾಜೇಶ್, ಗೌರವಾಧ್ಯಕ್ಷ ವರ ಪ್ರಸಾದ, ಚೌಡೇಶ್ವರಿ ಮಹಿಳಾ ಮಂಡಳಿಯ ಅಧ್ಯಕ್ಷೆ ಅನ್ನಪೂರ್ಣ ಗೂಡ, ಆನಂದ ಉಪ್ಪಳ, ಪಿರಿಮಳ್ ವೀರೇಶ್ , ಕೆ.ನವೀನ್ ಸೇರಿದಂತೆ ಇನ್ನಿತರರು ಇದ್ದರು.

# ಸಚಿವರಿಂದ 20 ಲಕ್ಷ ವೆಚ್ಚದಲ್ಲಿ ವೀರಶೈವ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಚಾಲನೆ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಪಂಪಾ ಕಾಲೋನಿ ಈಶ್ವರ ದೇವಸ್ಥಾನದ ಹತ್ತಿರ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್,ಬೋಸರಾಜು 2025–26 ನೇ ಸಾಲಿನ ಸಿ.ಎಂ.ಐ.ಡಿ.ಪಿ.ಯೋಜನೆಯಡಿಯಲ್ಲಿ ಅಂದಾಜು 20 ಲಕ್ಷ ವೆಚ್ಚದಲ್ಲಿ ವೀರಶೈವ ಸಮಾಜದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆಯನ್ನು ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ ಪಟ್ಟಣದ ಹೃದಯಭಾಗದಲ್ಲಿರುವ ಈಶ್ವರ ದೇವಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದು ದೇವಸ್ಥಾನದ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ 20 ಲಕ್ಷ ಅನುದಾನದಲ್ಲಿ ವೀರಶೈವ ಸಮಾಜದ ಸಮುದಾಯ ಭವನ ನಿರ್ಮಾಣ ಮಾಡಲಾಗುತ್ತಿದೆ ಎಂದು ತಿಳಿಸಿದರು. ಶಾಸಕ ಹಂಪಯ್ಯನಾಯಕ, ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ,ನಯೋಪ್ರ ಅಧ್ಯಕ್ಷರಾದ ಅಬ್ದುಲ್ ಗಾಫೂರ್ ಸಾಬ್, ಕಲ್ಮಠ ಸಂಗಯ್ಯಸ್ವಾಮಿ, ಡಾ.ಬಸವಪ್ರಭು ಪಾಟೀಲ್,ದೊಡ್ಡಬಸಪ್ಪಗೌಡ ಭೋಗವತಿ, ಟಿ.ಎ.ಪಿ.ಸಿ.ಎಂ.ಸಿ. ಅಧ್ಯಕ್ಷರಾದ ತಿಮ್ಮರೆಡ್ಡಿಗೌಡ ಭೋಗವತಿ, ತಾಲೂಕು ವೀರಶೈವ ಲಿಂಗಾಯತ ಸಮಾಜದ ತಾ.ಅಧ್ಯಕ್ಷರಾದ ಹರಿಹರ ಪಾಟೀಲ್,ಗೌರವಧ್ಯಕ್ಷರಾದ ಶ್ರೀಧರಸ್ವಾಮಿ, ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾ ತಾ.ಅಧ್ಯಕ್ಷರಾದ ಅರುಣಚಂದಾ, ರೇವಣಸಿದ್ದಯ್ಯಸ್ವಾಮಿ, ವೀರನಗೌಡ ವಕೀಲರು, ರಾಜಾ ಸುಭಾಶ್ಚಂದ್ರನಾಯಕ,ಜಗದೀಶ ಓತ್ತೂರ್, ಸಂಗಮೇಶ ಮುಧೋಳ್ ಸೇರಿದಂತೆ ವೀರಶೈವ ಲಿಂಗಾಯತ ಸಮಾಜದ ಮುಖಂಡರು ಭಾಗವಹಿಸಿದರು.

# ಕರಡಿಗುಡ್ಡ ಗ್ರಾಮದಲ್ಲಿ 65 ಲಕ್ಷದ ವೆಚ್ಚದಲ್ಲಿ ನೂತನ ಆಸ್ಪತ್ರೆ ನಿರ್ಮಾಣ: ಎನ್.ಎಸ್.ಬೋಸರಾಜು



ಧೈರ್ಯದ ದಾರಿ

**ಮಾನ್ವಿ:** ತಾಲೂಕಿನ ಕರಡಿಗುಡ್ಡ ಗ್ರಾಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಡಿಯಲ್ಲಿ ಅಂದಾಜು 65 ಲಕ್ಷದ ವೆಚ್ಚದಲ್ಲಿ ನೂತನ ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ ರಾಜ್ಯ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಶಂಕುಸ್ಥಾಪನೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ ರಾಜ್ಯ ಸರಕಾರವು ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಆರೋಗ್ಯ ಸೇವೆಗಳನ್ನು ನೀಡುವುದಕ್ಕೆ ಹೆಚ್ಚಿನ ಅದ್ಯಾತೆಯನ್ನು ನೀಡುತ್ತಿದು ಕರೆಗುಡ್ಡ ಗ್ರಾಮದಲ್ಲಿ ಅಂದಾಜು 65 ಲಕ್ಷದ ವೆಚ್ಚದಲ್ಲಿ ನೂತನ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತಿದು ತಾಲೂಕಿನ ಪೋತ್ನಾಳ್ ಹಾಗೂ ಮಾನ್ವಿ ಪಟ್ಟಣದಲ್ಲಿಯು ಕೂಡ ಶಿಘ್ರವೇ ನೂತನ ಆಸ್ಪತ್ರೆಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು ಅಧಿಕಾರಿಗಳು ಹಾಗೂ ಗುತ್ತೆದಾರರು ಕಾಮಗಾರಿಗಳನ್ನು ಅದಷ್ಟು ಕಡಿಮೆ ಸಮಯದಲ್ಲಿ ಪೂರ್ಣಗೊಳಿಸುವ ಮೂಲಕ ಸಾರ್ವಜನಿಕರಿಗೆ ಉಪಯೋಗವಾಗುವಂತೆ ನೊಡಿಕೊಳ್ಳಬೇಕು ಎಂದು ತಿಳಿಸಿದರು.

ಶಾಸಕ ಜಿ.ಹಂಪಯ್ಯ ನಾಯಕ್ , ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫುರ್ ಸಾಬ್, ತಾ. ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ಬಿ.ಕೆ. ಅಮರೇಶಪ್ಪ ವಕೀಲರು, ರುದ್ರಪ್ಪ ಅಂಗಡಿ, ಲಿಂಗಪ್ಪ ಕರಡಿಗುಡ್ಡ ಗುತ್ತೇದಾರರು, ಗೋಪಾಲ್ ನಾಯಕ್ ಕರಡಿಗುಡ್ಡ, ಸೈಯದ್ ಖಾಲಿದ್ ಖಾದ್ರಿ, ಚಾಂದ್ ಪಾಷಾ ಗುತ್ತೇದಾರರು, ಬುದ್ದೀನ್ ನಸಲಾಪುರ್, ಎಸ್.ಫಯಾಜುದ್ದೀನ್, ಸತ್ತಾರ್ ಬಂಗ್ಲೆವಲೇ, ರಸುಲ್ ಖುರೇಶಿ, ಸೇರಿದಂತೆ ಇನ್ನಿತರರು ಇದ್ದರು.

# ಜಿಲ್ಲಾ ಮಟ್ಟದ ಮಕ್ಕಳ ಬೇಸಿಗೆ ಶಿಬಿರಕ್ಕೆ ಚಾಲನೆ



**ಬೀದರ, ಏ 20:** ರಾಜ್ಯ ಬಾಲ ಭವನ ಸೊಸೈಟಿ ಬೆಂಗಳೂರು, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲ ಭವನ ಸಮಿತಿ ಬೀದರ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಮಕ್ಕಳ ಬೇಸಿಗೆ ಶಿಬಿರದ ಉದ್ಘಾಟನಾ ಕಾರ್ಯಕ್ರಮವು ಸೋಮವಾರ ಬೆಳಿಗ್ಗೆ 10:30ಕ್ಕೆ ಜಿಲ್ಲಾ ಬಾಲ ಭವನ ಸಮಿತಿ ಸಭಾಂಗಣದಲ್ಲಿ ನೆರವೇರಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಶ್ರೀಮತಿ ಶಾರದಾ ಕಲ್ಮಲ್ಕರ್ ಅವರು ಮಕ್ಕಳೊಂದಿಗೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರತಿವರ್ಷದಂತೆ ಈ ವರ್ಷವೂ 5 ರಿಂದ 16 ವರ್ಷದೊಳಗಿನ ಮಕ್ಕಳಿಗಾಗಿ ವಿವಿಧ ತರಬೇತಿ ಚಟುವಟಿಕೆಗಳನ್ನು ಉಚಿತವಾಗಿ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಶಿಬಿರದಲ್ಲಿ ಮಕ್ಕಳ ಸೃಜನಾತ್ಮಕತೆ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಚಿತ್ರಕಲೆ, ಕರಕುಶಲೆ, ಜೇಡಿ ಮಣ್ಣಿನ ಕಲೆ, ಕರಾಟೆ, ಯೋಗ ಮತ್ತು ಧ್ಯಾನ, ಸಮೂಹ ನೃತ್ಯ ಹಾಗೂ ನಾಟಕ ಮುಂತಾದ ಚಟುವಟಿಕೆಗಳಿಗೆ ಅನುಭವಿ ಸಂಪನ್ಮೂಲ ಬೋಧಕರಿಂದ ಉಚಿತ ತರಬೇತಿ ನೀಡಲಾಗುತ್ತಿದೆ. ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಂಗವಿಕಲರ ಕಲ್ಯಾಣ ಅಧಿಕಾರಿ ಶ್ರೀ ಶುಭಾಷ್ ರತ್ನ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರಕುಶಲೆ ಮತ್ತು ನಾಟಕ ತರಬೇತಿದಾರ ಶ್ರೀ ಮಹೇಶ ಧೂಪೆ, ನೃತ್ಯ ತರಬೇತಿದಾರ ಕು. ನೇಹಾ ಕಾಂಬ್ಳೆ, ಕರಾಟೆ ಮತ್ತು ಯೋಗ ತರಬೇತಿದಾರ ಕು. ಸುದೇಶ ಮೋರೆ, ಚಿತ್ರಕಲೆ ಮತ್ತು ಜೇಡಿ ಮಣ್ಣಿನಕಲೆ ತರಬೇತಿದಾರ ಶ್ರೀ ದೇವಿಂದ್ರ ವಾಳ್ಕೆ ಉಪಸ್ಥಿತರಿದ್ದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಸುಮಾರು 60 ಮಕ್ಕಳು ಹಾಗೂ ಅವರ ಪಾಲಕರು/ಪೊ?ಷಕರು ಭಾಗವಹಿಸಿ ಶಿಬಿರದ ಕುರಿತು ಮಾಹಿತಿ ಪಡೆದುಕೊಂಡರು. ಮಕ್ಕಳ ಪ್ರತಿಭೆ ಅನಾವರಣಕ್ಕೆ ಈ ಶಿಬಿರವು ಉತ್ತಮ ವೇದಿಕೆಯಾಗಿ ಪರಿಣಮಿಸಲಿದೆ ಎಂದು ಪೊಷಕರು ಸಂತಸ ವ್ಯಕ್ತಪಡಿಸಿದರು.

ಈ ಶಿಬಿರವು ಬೇಸಿಗೆ ರಜಾದಿನಗಳಲ್ಲಿ ಮಕ್ಕಳಿಗೆ ಸೃಜನಾತ್ಮಕ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಮಹತ್ವದ ಅವಕಾಶ ಒದಗಿಸಿದೆ.

# ಶೋಷಿತರ ಸ್ವರ ಸಮಾನತೆಯ ಸಂತ–ವಿಶ್ವಗುರು ಬಸವಣ್ಣ


ಬಸವಣ್ಣನವರು ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿಯಲ್ಲಿ ತಂದೆ ಮಾದರಸ, ತಾಯಿ ಮಾದಲಂಬಿಕೆ, ದಂಪತಿಗಳಿಗೆ ಜನಿಸಿದರು, 12 ವರ್ಷಗಳ ಕಾಲ ಕೂಡಲ ಸಂಗಮದಲ್ಲಿ ಅಧ್ಯಾಯನ ಮಾಡಿದರು ನಂತರ ಕುಲಿಶಾ ಪಶುಪಾಟ ಸಂಪ್ರದಾಯದ ಒಂದು ಶೈವಕಲಿಕೆಯಲ್ಲಿ ಸಂಗಮೇಶ್ವರದಲ್ಲಿ ಮುಗಿಸಿದರು. ಬಸವಣ್ಣ ತನ್ನ ತಾಯಿ ಕಡೆಯಿಂದ ಸಹೋದರಿ ಸಂಬಂದಿಯನ್ನು ಮದುವೆಯಾದರು.

ಸಾಮಾಜಿಕ ಕ್ರಾಂತಿಯ ಹರಿಕಾರ

ಬಸವಣ್ಣ ನವರನ್ನು ಕರ್ನಾಟಕದ ಮಾರ್ಟಿನ್ ಲೂಥರ್ ಎಂದು ಕರೆಯುತ್ತಾರೆ. ಇವರು ಸಾಮಾಜಿಕ ಸುಧಾರಕರಾಗಿದ್ದರು. ತಮ್ಮ ದನಗಳ ಮೂಲಕ ಸಾಮಾಜಿಕ ಹರಿವು ಹರಡಿದರು. ಲಿಂಗತಾರತದ್ದಯ್ಯ, ಸಾಮಾಜಿಕ ತಾರತಮ್ಯ, ಮೂಡನಂಬಿಕೆಗಳನ್ನು ನಿರಾಕರಿಸಿದರು.

ಅನುಭವ ಮಂಟಪ (ಆಧ್ಯಾತ್ಮಿಕ ಅನುಭವ ಭವನ) ಸ್ಥಾಪಿಸಿ (ಈಗಿನ ವಿಧಾನಸಭೆ.ಲೋಕಸಭೆ ಮಾದರಿ) ಇಲ್ಲಿ ಎಲ್ಲಾ ಸಾಮಾಜಿಕ ಆರ್ಥಿಕ ಹಿನ್ನಲೆಯ ಪುರುಷರು ಮತ್ತು ಮಹಿಳೆಯರು ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಪ್ರಶ್ನೆಗಳನ್ನು ಮುಕ್ತವಾಗಿ ಚರ್ಚಿಸಲು ಅವಕಾಶ ಮಾಡಿಕೊಟ್ಟರು ಬಸವಣ್ಣನವರ ಜೊತೆ 770 ಅಮರ ನಾಂಗಳು, ಇದ್ದರೆಂದು ಮತ್ತು 1 ಲಕ್ಷ 96000 ಸಾವಿರ ಶರಣರು ಇದ್ದಾರೆಂದು ಹೇಳಲಾಗಿದೆ. ಬಸವಣ್ಣ ನವರು ದೃಷ್ಟಿಯಲ್ಲಿ ದೇವರು ಮಾನವರಲ್ಲಿ ಇದ್ದಾನೇಯ ಹೊರತು, ಗುಡಿ ಗುಂಡಾರಗಳಲ್ಲಿ ಅಲ್ಲ ಕೆಲಸಮಾಡಿ ಜೀವನ ನಡೆಸಬೇಕು. ಆಲಸ್ಯ ಜೀವನ ಸಲ್ಲ, ಸುಳ್ಳು ಹೇಳುವುದು, ವಂಚಿಸುವುದು, ಕೊಲೆ ಸುಲಿಗೆ ಮಾಡುವುದು ಪ್ರಾಣಿ ಬಲಿ ನೀಡುವು, ಪರಧನ ಹರಣ, ಪರ ಸ್ತ್ರೀ ವ್ಯಾಮೋಹ ಎಂಬುವುದು ಘೋರ ಅಪರಾದ ಎಂದು ಹೇಳಿದರು.

ಕೆಲಸದಲ್ಲಿ ಮೇಲು ಅಥವಾ ಕೀಳು ಎಂಬುದಿಲ್ಲ. ಪುರುಷನಂತೆ ಮಹಿಳೆಗೂ ವಿದ್ಯಾಭ್ಯಾಸದ ಮತ್ತು ತನ್ನ ಜೀವನವನ್ನು ರೂಪಿಸಿಕೊಳ್ಳುವ ಹಕ್ಕಿದೆ. ಹೀಗೆ ಸಮಾದತೆ, ಕಾಯಕ, ದಾಸಹೋಹ ತತ್ವಗಳನ್ನು ಸ್ವೀಕರಿಸುವ ಮತ್ತು ಆಚರಿಸುವ ಯಾರೂ ಬೇಕಾದರೂ




ಶಿವ ಶರಣರಾಗ ಬಹುದು ಎಂದು ಬಸವಣ್ಣವರು ಸಾರಿದರು. ಪೊಳ್ಳು ದೇವರುಗಳನ್ನು ಸುತ್ತಿಸುತ್ತಿದ್ದ ಮತ್ತು ಪುರೋಹಿತಶಾಹಿಯಿಂದ ನಿರಂತರವಾಗಿ ವಂಚನೆಗೊಳಗಾಗುತ್ತಿದ್ದ ಜನತೆಗೆ ಬಸವಣ್ಣನವರು ಹೋಸ ಜೀವನ ನೀಡಿದರು. ಜಾತಿ, ಮತ, ಲಿಂಗಗಳ ಭೇದವನ್ನು ಸಿರಸ್ಕರಿಸಿದ ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ಕಾರಣವಾದರು. ಬಸವಣ್ಣನವರನ್ನು ಜಗಜ್ಯೋತಿ ಬಸವೇಶ್ವರ, ಕಾಂತಿಯೋಗಿ ಬಸವಣ್ಣು ಭಕ್ತಿ ಭಂಡಾರಿ ಬಸವಣ್ಣ, ಮಹಾ ಮಾನವಜನಎಂದಿ ಎಂದು ಕರೆಯಲಾಗುತ್ತದೆ. ಮಾನವಿಯತೆ, ಕಾಯಕ ನಿಷ್ಠೆ ಧರ್ಮದ ಬುನಾದಿಯಾಗಬೇಕು ಎಂದು ಬಲವಾಗಿ ನಂಬಿದ್ದರು.

ಬಸವಣ್ಣ ತಮ್ಮ ವಚನಗಳ ಮೂಲಕ ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ, ಅಯ್ಯ ಎಂದರೆ ಸ್ವರ್ಗ ಎಲ್ಲವೇ ಎಂದರೆ ನರಕ ಎಂದು ಸಾರುವ ಮೂಲಕ ತಮ್ಮ ಮಾನವತಾವಾದಕ್ಕೆ ಸಾಹಿತ್ಯದ ಸ್ಪರ್ಶ ನೀಡಿದರು. ಕನ್ನಡ ಸಾಹಿತ್ಯಕ್ಕೆ ವಚನಗಳ ಮೂಲಕ ಅಪೂರ್ವ ಕೊಡುಗೆ ಅಪಾರ ಇದುವರೆಗೆ ಸುಮಾರು 1500 ವಚನಗಳನ್ನು ಸಂಗ್ರಹಿಸಿಡಲಾಗಿದೆ.

1992 ರಲ್ಲಿ 2 ರೂಪಾಯಿ ಮುಖ ಬೆಲೆಯುಳ್ಳ ಅಂಚೆ ಚೀಟಿಯನ್ನು, ಅಂಚೆ ಇಲಾಖೆಯು ಮತ್ತು ಮುದ್ರಿಸಿತು. ಗುರು ಬಸವಣ್ಣವರ ಭಾವಚಿತ್ರವುಳ್ಳ 5 ರೂಪಯಾ ಮತ್ತು 100 ರೂಪಾಯಿ ನಾಣ್ಯಗಳನ್ನು ಮಾಜಿ ಪ್ರಧಾನಿ ಡಾ. ಮನಮೋಹನ ಸಿಂಗ್ ಅವರು ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಿದರು. ಬಸವಣ್ಣನವರು ನಾಣ್ಯದ ಮೇಲೆ ಪ್ರಕಟಿಸಲ್ಪಟ್ಟವರಲ್ಲಿ ಪ್ರಥಮ ಕನ್ನಡಿಗ ದಾಗಿದ್ದಾರೆ.

ಗುರು ಬಸವಣ್ಣರವ ಅಶ್ವಾರೂಢ ಮೂರ್ತಿಯನ್ನು ದೆಹಳಯಲ್ಲಿರುವ ಪಾರ್ಲಿಮೆಂಟ್ ನಲ್ಲಿ 27ನೇ ಎಪ್ರೀಲ್ 2003 ರಲ್ಲಿ ಅನಾವರಣಗೊಳಿಸಲಾಯಿತು ನಾವುಗಳು ಬಸವಣ್ಣನವರ ಜಯಂತಿಯನ್ನು ಕೇವಲ ಜಯಂತಿಯನ್ನಾಗಿ ಆಚರಿಸದೆ ಅವರ ಜೀವನವನ್ನು ನಮ್ಮ ಜೀವನವನ್ನಾಗಿ ಮಾಡಿಕೊಳ್ಳಬೇಕು ಬಸವಣ್ಣವರನ್ನು ಮೇರಣಿಗೆಯಲ್ಲಿ ನೋಡದೆ ನಮ್ಮ ನಡುವಳಿಕೆ ನೋಡಬೇಕು. ಬಸವಣ್ಣವರನ್ನು ಕೇವಲ ಮೂರ್ತಿಗಳಲ್ಲಿ ನೋಡಿದ ನಮ್ಮ ಕೃತಿಗಳಲ್ಲಿ ಕಾಣುವಂತಾಗಬೇಕು.



**–ಲೇಖನ ಈರೇಶ ಹುಲಗುಂಚಿ ಮಾನವಿ**

# ಯುವಕರು ಊರಿನ ಅಭಿವೃದ್ಧಿಯ ಶಿಲ್ಪಿಗಳು– ಮಹಿಬೂಬ್ ಮದ್ಲಾಪುರ



ಧೈರ್ಯದ ದಾರಿ

"ಯುವಕರು ಕ್ರೀಡೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಅತ್ಯುತ್ತಮ ಕ್ರೀಡಾಪಟುಗಳಾಗಿ ಹೊರಹೊಮ್ಮಬೇಕು, ಜಾತಿ, ಧರ್ಮ, ಮೇಲು– ಕೇಳು, ಸಣ್ಣವ ದೊಡ್ಡವ ಎಂಬ ಬೇದ ಮರೆತು ಅಡುವಾಗ ಎಷ್ಟು ಚಂದ ಅನ್ಸುತ್ತದೆ. ನಮ್ಮೂರಿಗೆ ಇರುವ ರೆಡ್ ಕ್ರಿಮಿನಲ್ ಪಟ್ಟಿಯನ್ನು ತೆಗೆದು ಹಾಕುವ ಮಹಾತ್ಕಾರ್ಯ ಯುವಕರಿಂದ ಮಾತ್ರ ಸಾದ್ಯ. ನೀವು ನಮ್ಮೂರಿನ ಭವಿಷ್ಯ, ಯುವಕರೇ ನಿಮ್ಮಿಂದ ಊರಿನ ಅಭಿವೃದ್ಧಿ ಸಾದ್ಯ, ನೀವೇ ಶಿಲ್ಪಿಗಳು. ಜೊತೆಗೆ ದುಶ್ಚಟಗಳಿಗೆ ಬಲಿಯಾಗದೇ ತಂದೆ ತಾಯಿಗಳಿಗೆ ಒಳ್ಳೆಯ ಮಕ್ಕಳಾಗಿ ದೇಶದ ಅತ್ಯುತ್ತಮ ಪ್ರಜೆಗಳಾಗಿ ಇತಿಹಾಸ ಸೃಷ್ಟಿಸಿ" ಎಂದು ಹೇಳಿದರು.

ಕ್ರೀಡೆಯಲ್ಲಿ ನಾವೆಲ್ಲಾ ಒಂದು ಎಂಬ ಭಾವ ತುಂಬಿರಲಿ, ಪ್ರತಿಯೊಬ್ಬರು ಕ್ರೀಡಾ ಮನೊಭಾವ ಬೆಳೆಸಿಕೊಂಡು ಸ್ಪರ್ಧೆಯಲ್ಲಿ ಭಾಗಿಯಾಗಬೇಕು ನಾವೆಲ್ಲಾ ಒಂದು ಎಂಬ ಭಾವ ತುಂಬಿಕೊಂಡು ಆಡಬೇಕು ಗೆದ್ದವರಿಗೆ ಅಭಿನಂದನೆಗಳು ಸೋತವರಿಗೆ ಬೆಟರ್ ಲಕ್ ನೆಷ್ಟ್ ಎಂದು ಪ್ರಥಮ ಬಹುಮಾನ ದಾನಿ ತಿಮ್ಮನಗೌಡ ಶುಭಾಷಯ ಕೊರಿದರು. ಮದ್ಲಾಪುರ ಕ್ರಿಕೇಟ್ ಪ್ರೀಮಿಯರ್ ಲೀಗ್ ಸಿಸಜ್ –2 ರ ಫೈನಲ್ ಪಂದ್ಯವು ಊರಿನ ಗುರುದೇವ್ ಕ್ರೀಡಾಂಗಣದಲ್ಲಿ ಜರುಗಿತು.

ಎಂ. ವಿರಾಟ್ ಚಾಲೆಂಜರ್ಸ್ ಮಾಲಿಕ ದ್ವಿತೀಯ ಬಹುಮಾನ ವಿತರಕರಾದ ಶೀವುಕುಮಾರ್ ಸಾಲಿ "ಮಾತನಾಡಿ ನಮ್ಮೂರು ಕ್ರಿಕೇಟ್ ನಲ್ಲಿ ಒಳ್ಳೆಯ ಸಾದನೆ ಮಾಡಬೇಕಾದರೆ ನಿಮ್ಮಲ್ಲಿ ಆತ್ಮೀಯತೆ ಇರಬೇಕು ಸ್ಫೂರ್ತಿಯಾಗಿರಬೇಕು ದೇಹ ಚನ್ನಾಗಿಟ್ಟುಕೊಳ್ಳಬೇಕು ಎಂದರು.

ಒಟ್ಟು ಎಂಟು ತಂಡಗಳು ಭಾಗಿಯಾಗಿ ಅದರಲ್ಲಿ ಎರಡು ತಂಡ ಫೈನಲ್ ಪ್ರವೇಶ ಪಡೆದವು ಚಾಂಪಿಯನ್ ತಂಡವಾಗಿ ವಿನಯ್ ನಾಯಕ ಮಾಲಿಕತ್ವದ ಎಂ. ಬುಲ್ಡೋಜರ್ಸ್ ರನ್ನರಫ್ ಅಜಿತ್ ಪಾಟೀಲ್ ಎಂ. ಚಾಲೆಂಜರ್ಸ್ ತಂಡ ಪಡೆದುಕೊಂಡಿತು.

ವೇಧಿಕೆಯಲ್ಲಿ ಎಂ. ಇಂಡಿಯನ್ ತಂಡದ ಜಿ. ಈರಣ್ಣ ನಾಯಕ, ಎಂ. ಕಿಂಗ್ ಎಲೆವನ್ ನ ಯಲ್ಲೇಶ, ಎಂ. ವಿರಾಟ್ ನ ಗ್ರಾಮ ಪಂಚಾಯತ್ ಸದಸ್ಯ ಬಸವರಾಜ, ಎಂ. ಸುಪರ್ ಕಿಂಗ್ಸ್ ಹನುಮಂತ, ಎಂ. ತ್ರಿಸಿಕ್ಸ್ಟೀ ಭೀಮೇಶ್, ದಾನಿ ಬಾಲಯ್ಯ ಬಾರ್ಕೇರ್, ಆಯೋಜಕರಾದ ರವಿಭೋವಿಕರ್, ಅಯ್ಯೊಪ್ಪ,ಸುಭಾಷ, ಕೃಷ್ಣ, ಸೋನ, ಅಶೋಕ, ಜಾನಿ, ಅಂಬಣ್ಣ, ವಿಶ್ವ,

ಕಾಮೆಂಟರಿ ಶಿವಮೂರ್ತಿ, ಸ್ಕೋರರ್ ಅನ್ವರ್ ಮಹಾದೇವ, ನಿರೂಪಣೆಯಲ್ಲಿ ವೆಂಕಟೇಶ ಬಿ.

# ಡಿ ಜಿ ಸಾಗರ್ ಬಣದಿಂದ ಬಸವ ಜಯಂತಿ



**ಬಳ್ಳಾರಿ, ಏ.20:** ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಡಾ.ಡಿಜಿ ಸಾಗರ ಬಣ)ದಿಂದ ಇಂದು ನಗರದ ಹೆಚ್. ಆರ್. ಗವಿಯಪ್ಪ ವೃತ್ತದಲ್ಲಿರುವ ಕರ್ನಾಟಕದ ಸಾಂಸ್ಕೃತಿಕ ನಾಯಕ, ಶಿವಶರಣ, ಜಗಜ್ಯೋತಿ, ವಿಶ್ವಗುರು ಶ್ರೀ ಬಸವಣ್ಣನವರ ಜಯಂತಿಯನ್ನು ಪುತ್ಥಳಿಗೆ ಮಾಲಾರ್ಪಣೆ ಮಾಡಿ ಆಚರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಎ. ಮಾನಯ್ಯ ರಾಜ್ಯ ಸಂಘಟನಾ ಸಂಚಾಲಕರು. ಟಿ ನರಸಪ್ಪ ರಾಜ್ಯ ಉಪಾಧ್ಯಕ್ಷರು ಚಲವಾದಿ ಮಹಾಸಭಾ.

ಮಲ್ಲಯ್ಯ ಕೊಳಗಲ್ಲು. ಜಿಲ್ಲಾ ಸಂಘಟನಾ ಸಂಚಾಲಕರು. ಎಚ್. ಆಂಜನೇಯ ಎಂ. ಗೋನಾಳ್. ಜಿಲ್ಲಾ ಸಂಘಟನಾ ಸಂಚಾಲಕರು. ಮುಖಂಡರುಗಳಾದ ಟಿ.ಎಂ. ಎರ್ರಿಸ್ವಾಮಿ. ಮಹೇಶ್ ಇಂದಿರಾನಗರ. ಬಿ.ರಮೇಶ್ ಎಂ.ಎಸ್.ಭೀಮಾಶಂಕರ್. ಎಚ್.ಮಲ್ಲಪ್ಪ ಎಚ್.ಶಂಕರ್. ಬಾಪೂಜಿನಗರ್. ಶಿವರಾಜ್ ಮಹಾನಂದಿಕೊಟ್ಟಂ. ಹನುಮಂತ ಎತ್ತಿನ ಬೂದಿಹಾಳ್. ಡಿ. ದುರ್ಗದಾಸ್ ಸಿದ್ದಾರ್ಥ್ ನಗರ. ಶಿವು ಅಸುಂಡಿ. ತಿಪ್ಪೇಸ್ವಾಮಿ ಅಯ್ಯ.ಶೇಷಪ್ಪ ಹಲಕುಂದಿ. ರಾಜಣ್ಣ ಇಂದ್ರನಗರ್. ಶಿವು ಶ್ರೀಧರ ಗಡ್ಡ. ಪರಶುರಾಮ ವದ್ದಟ್ಟಿ. ತಿರುಮಲ ಎರಗುಡಿ. ಇಂದ್ರೇಶ. ಸುರೇಂದ್ರ ಇಬ್ರಾಹಿಂಪುರ್. ಶಿವು ಕಪ್ಪಗಲ್ಲು.ಶೇಖರ್ ಸಿದ್ದಾರ್ಥ್ ಕಾಲೋನಿ. ಭಾಸ್ಕರ್ ಸಿದ್ದಾರ್ಥ್ ಕಾಲೋನಿ. ಗದಿಲಿಂಗ ಜಾಲಿಹಾಳ್.ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

# ಕಾಂಗ್ರೆಸ್‌ಗೆ ನಾರಿ ಶಕ್ತಿಯ ಶಾಪ ತಟ್ಟದೆ ಬಿಡದು: ಭಗವಂತ ಖೂಬಾ



**ಬೀದರ್:ಏ.20:** ಕಾಂಗ್ರೆಸ್ ಪಕ್ಷವು ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ವಿಧೆಯಕಕ್ಕೆ ವಿರೋಧ ವ್ಯಕ್ತಪಡಿಸಿ ಅದು ಜಾರಿಯಾಗದೇ ಇರಲು ಮುಖ್ಯ ಕಾರಣವಾಗಿದ್ದು, ಇದರಿಂದ ನಾರಿ ಶಕ್ತಿಯ ಶ್ರಾಪ ಕೈ ನಾಯಕರಿಗೆ ಖಂಡಿತ ತಟ್ಟಲಿದೆ ಎಂದು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ತಿಳಿಸಿದರು.

ಭಾನುವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, 12ನೇ ಶತಮಾನದಲ್ಲಿ ಅಣ್ಣ ಬಸವಣ್ಣನವರ ಕಾಲದಲ್ಲಿ ಅಕ್ಕ ಮಹಾದೇವಿ, ಅಕ್ಕ ನಾಗಮ್ಮ, ಆಯ್ದಕ್ಕಿ ಲಕ್ಕಮ್ಮ, ಕಲ್ಯಾಣಮ್ಮ ಸೇರಿದಂತೆ 50 ಪ್ರತಿಶತದಷ್ಟು ಶಿವಶರಣೆಯರು ಅನುಭವ ಮಂಟಪದ ಭಾಗವಾಗಿರುವ ಈ ದೇಶದಲ್ಲಿ 800 ವರ್ಷಗಳ ಬಳಿಕ ಈ ದೇಶದಲ್ಲಿ ದೇಶವನ್ನು ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಕಾರಣಿಕರ್ತರಾದ ಮಹಿಳಾ ಲೋಕಕ್ಕೆ ಅವಮಾನ ಮಾಡಿರುವ ಕಾಂಗ್ರೆಸ್ ಪಕ್ಷಕ್ಕೆ ಬರುವ ವರ್ಷಗಲಲ್ಲಿ ಒಳ್ಳೆಯ ಪಾಠ ಕಲಿಸಲಿದ್ದಾರೆ ಎಂದರು.

ಮಹಿಳಾ ಮೀಸಲಾತಿ ವಿಧೆಯಕದಿಂದ ದಕ್ಷಿಣದ ರಾಜ್ಯಗಳಿಗೆ ಯಾವುದೇ ಹಾನಿಯಾಗುವುದಿಲ್ಲ. ಬದಲಿಗೆ ಕ್ಷೇತ್ರ ಪುನರ್ ವಿಂಗಡಣೆಯಿಂದ ಕರ್ನಾಟಕದಲ್ಲಿ ಪರಿಶಿಷ್ಟರಿಗೆ ಈಗಿರುವ ಲೋಕಸಭೆಯ 9 ಸ್ಥಾನಗಳಿ ಬದಲು, 11, ಒಟ್ಟು 28ರ ಬದಲು 42 ಸ್ಥಾನಗಳು ಹೆಚ್ಚಾಗಿ ಮಹಿಳೆಯರಿಗೂ ಸ್ಥಾನ ಕಲ್ಪಿಸಲು ಸಾಧ್ಯವಾಗುತ್ತಿತ್ತು. ಇದರಿಂದ ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟು ಜನಾಂಗದವರಿಗೂ ವಿಶೇಷವಾಗಿ ಇದನ್ನು ಮಹಿಳಾ ಮಣಿಯರಿಗೆ ಮಾಡಿದ ಮಹಾದ್ರೋಹ ಎಂದರು.

ಫಸಲು ವಿಮೆ ಬಗ್ಗೆ ಮಾತನಾಡಿರುವ ಮಾಜಿ ಕೇಂದ್ರ ಸಚಿವರು ಜಿಲ್ಲಾ ಉಸ್ತುವಾರಿ ಸಚಿವ ಖಂಡ್ರೆಯವರು ಫಸಲು ವಿಮೆ ಹಣ ಬಂದಿಲ್ಲ ಎಂದು ಆಪಾದಿಸಿದ್ದರು. ಆದರೆ ನಮ್ಮ ಕೇಂದ್ರ ಸರ್ಕಾರವು 1 ಲಕ್ಷ 60 ಸಾವಿರ ರೈತರಿಗೆ 100 ಕೋಟಿ 66 ಲಕ್ಷ ಫಸಲು ವಿಮೆ ಹಣ ನೀಡಿದೆ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾದ ಅಧ್ಯಕ್ಷೆ ಉಲ್ಲಾಸಿನಿ ಮುದಾಳೆ ಮಾತನಾಡಿ, ನಮ್ಮ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿಜಿಯವರು ನಾರಿಶಕ್ತಿಯನ್ನು ಸದಾ ಗೌರವಿಸುತ್ತಾರೆ. ಹಾಗಾಗಿ ಮಹಿಳಾ ಮೀಸಲಾತಿ ವಿಧೆಯಕ ಜಾರಿಗೆ ತರಲು ಸಂಸತ್ತಿನಲ್ಲಿ ಪ್ರಯತ್ನಿಸಿದರು. ಧರ್ಮದ ಮೇಲೆ ಹಾಗೂ ಜಾತಿ ಜಾತಿಗಳ ನಡುವೆ ಸದಾ ವಿಶ ಬೀಜ ಬಿತ್ತುವ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳು ಈ ವಿಧೆಯಕವನ್ನು ವಿರೋಧಿಸುವ ಮೂಖೇನ ಇಡೀ ಮಹಿಳಾ ಲೋಕಕಕ್ಕೆ ಅವಮಾನ ಮಾಡಿದ್ದಾರೆ. ಇದನ್ನು ನಾರಿಶಕ್ತಿ ಸಹಿಸದು. ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ನಾಯಕರ ಮನೆ ಮುಂದೆ ಇಡೀ ಮಹಿಳಾ ಸಮೂಹ ಪ್ರತಿಭಟಿಸಲಿದೆ ಎಂದು ಎಚ್ಚರಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ ಮಾತನಾಡಿ, ಕಾಂಗ್ರೆಸ್ ಪಕ್ಷ ಸದಾ ನಮ್ಮನ್ನು ಮನುವಾದಿಗಳು, ಕೋಮುವಾದಿಗಳು ಎಂದು ಕರೆಯುವ ಇವರು ಮಹಿಳಾ ಮೀಸಲಾತಿ ಮಸುದೆಯನ್ನು ವಿರೋಧಿಸಿ ತಾವೆ ಕೋಮುವಾದಿಗಳು, ಮಹಿಳಾ ವಿರೋಧಿಗಳು ಎಂಬುದನ್ನು ಸಾಬಿತು ಮಾಡಿದ್ದಾರೆ. ಬರುವಂತಹ ದಿನಗಳಲ್ಲಿ ಕಾಂಗ್ರೆಸ್‌ನವರಿಗೆ ಜನ ತಕ್ಕ ಪಾಠ ಕಲಿಸದೆ ಬಿಡುವುದಿಲ್ಲ. ರಾಜ್ಯ ಸರ್ಕಾರ ಕಬ್ಬು ಸಾಗಿಸಿದ ರೈತರ ನಿಗದಿಪಡಿಸಿದ ಹಣ ರು.2800 ಇನ್ನು ಸಹ ಕೊಡಿಸದೇ ಅನ್ನಯ ಮಾಡಿದ್ದಾರೆ ಎಂದರು.

ಹಿರಿಯ ಮುಖಂಡರಾದ ಗುರುನಾಥ ಜ್ಯಾಂತಿಕರ್, ಮಹಾನಗರ ಪಾಲಿಕೆ ಸದಸ್ಯರಾದ ಶಶಿಧರ ಹೊಸಳ್ಳಿ, ರಾಜ್ಯ ಕಾರ್ಯಕಾರಿಣಿ ಸದಸ್ಯೆ ಶಕುಂತಲಾ ಬೆಲ್ದಾಳೆ, ಮಹಿಳಾ ಮೋರ್ಚಾ ಜಿಲ್ಲಾ ಪ್ರ.ಕಾರ್ಯದರ್ಶಿ ವಿಜಯಲಕ್ಷ್ಮೀ ಕೌಟಗೆ, ಕಾರ್ಯದರ್ಶಿ ಲುಂಬಿಣಿ ಗೌತಮ, ಮಾಧ್ಯಮ ವಿಭಾಗದ ಶ್ರೀನಿವಾಸ ಚೌಧರಿ, ಎಸ್.ಟಿ ಘಟಕದ ಪ್ರ.ಕಾರ್ಯದರ್ಶಿ ಅರುಣ ಬಾವಗೆ ಪತ್ರಿಕಾಗೋಷ್ಠಿಯಲ್ಲಿದ್ದರು.

# ಆಳಂದದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ :ಎರಡು ದಿನಗಳ ಭವ್ಯ ಉತ್ಸವಕ್ಕೆ ಭರದ ಸಿದ್ಧತೆ ಆರಂಭ



**ಆಳಂದ:ಏ.20:** ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ಪಟ್ಟಣದಲ್ಲಿ ಮೇ 6 ಮತ್ತು 7ರಂದು ಎರಡು ದಿನಗಳ ಕಾಲ ವಿಶೇಷ ಹಾಗೂ ಅರ್ಥಪೂರ್ಣ ಉತ್ಸವವನ್ನು ಆಯೋಜಿಸಲಾಗಿದ್ದು, ಭವ್ಯ ಕಾರ್ಯಕ್ರಮಗಳಿಗೆ ಸಿದ್ಧತೆ ಭರದಿಂದ ಸಾಗಿದೆ ಜಯಂತಿ ಪ್ರಚಾರ ಸಮಿತಿ ಅಧ್ಯಕ್ಷ ಶಿವಪುತ್ರ ನಡಗೇರಿ ಅವರು ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ಉತ್ಸವ ಸಮಿತಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ ಮಾತನಾಡಿದ ಅವರು, ಈ ಪ್ರಥಮ ಬಾರಿಗೆ ತಾಲೂಕು ಮಟ್ಟದ ಸಮಿತಿಯ ಆಶ್ರಯದಲ್ಲಿ ಸಂಯೋಜಿತವಾಗಿ ಉತ್ಸವವನ್ನು ಆಯೋಜಿಸಲಾಗುತ್ತಿದ್ದು, ಹೆಚ್ಚಿನ ಜನಸಾಮಾನ್ಯರ ಭಾಗವಹಿಸುವಿಕೆಗೆ ವಿಶೇಷ ಒತ್ತು ನೀಡಲಾಗಿದೆ ಎಂದು ಹೇಳಿದರು.

ಮೇ 6ರಂದು ಸಂಜೆ 5:00 ಗಂಟೆಗೆ ಪಟ್ಟಣದ ಶ್ರೀರಾಮ ಮಾರುಕಟ್ಟೆಯಲ್ಲಿ ಬೃಹತ್ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಈ ಸಮಾರಂಭದಲ್ಲಿ ಮೈಸೂರು ಉರಿಲಿಂಗ ಪೇದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ಖ್ಯಾತ ವಾಗ್ಮಿ ಸುಸ್ಮಾ ಅಂದಾರೆ, ರಾಜ್ಯಸಭಾ ಸದಸ್ಯೆ ಜ್ಯೋತಿ ವಾಘ್ಮೋರೆ, ಶಾಸಕ ಬಿ.ಆರ್. ಪಾಟೀಲ, ಮಾಜಿ ಶಾಸಕ ಸುಭಾಷ್ ಗುತ್ತೇದಾರ, ಜೆಡಿ(ಎಸ್) ಜಿಲ್ಲಾಧ್ಯಕ್ಷೆ ಮಹೇಶ್ವರಿ ಎಸ್. ವಾಲಿ, ಕೊಳಗಾಲದ ಮಾಜಿ ಶಾಸಕ ಎನ್. ಮಹೇಶ ಸೇರಿದಂತೆ ಅನೇಕ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಮುಖಂಡರು ಭಾಗವಹಿಸಲಿದ್ದಾರೆ.

ಸಮಾರಂಭದ ಬಳಿಕ ಕಲಬುರಗಿಯ ಡಾ. ಅಂಬೇಡ್ಕರ್ ಕಲಾ ತಂಡದಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನ ಸಾಧನೆಗಳನ್ನು ಪ್ರತಿಬಿಂಬಿಸುವ ನಾಟಕ ಪ್ರದರ್ಶನವೂ ನಡೆಯಲಿದೆ. ಈ ನಾಟಕವು ಅಂಬೇಡ್ಕರ್ ಅವರ ಚಿಂತನೆಗಳು ಮತ್ತು ಸಮಾಜ ಪರಿವರ್ತನೆಗೆ ಅವರ ಕೊಡುಗೆಯನ್ನು ಜನರಿಗೆ ತಲುಪಿಸುವ ಉದ್ದೇಶ ಹೊಂದಿದೆ ಎಂದರು.

ಮೇ 7ರಂದು ಬುದ್ಧ, ಬಸವ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಗಳೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ದಿನವಿಡೀ ಭವ್ಯ ಮೆರವಣಿಗೆ ನಡೆಯಲಿದೆ. ವಿವಿಧ ಸಾಂಸ್ಕೃತಿಕ ಕಲಾ ತಂಡಗಳ ಕಲಾತ್ಮಕ ಪ್ರದರ್ಶನಗಳು ಮೆರವಣಿಗೆಯ ಆಕರ್ಷಣೆಯಾಗಲಿವೆ.

ಸ್ಥಳೀಯ ಭೀಮನಗರದ ಆಶ್ರಯದಲ್ಲಿ ರಚಿತವಾದ ತಾಲೂಕು ಮಟ್ಟದ ಜಯಂತಿ ಉತ್ಸವ ಸಮಿತಿಯ ಮೂಲಕ ಈ ಬಾರಿ ವಿಶಿಷ್ಟ ರೀತಿಯಲ್ಲಿ ಆಚರಣೆ ನಡೆಯುತ್ತಿದ್ದು, ತಾಲೂಕಿನ ಅಭಿಮಾನಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಶಿವಪುತ್ರ ನಡಗೇರಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಉತ್ಸವ ಸಮಿತಿ ಅಧ್ಯಕ್ಷ ಸೂರ್ಯಕಾಂತ ಸಾಲೇಗಾಂವ, ಉಪಾಧ್ಯಕ್ಷ ಗಂಗಾರಾಮ ಮುದಗಲೆ, ಮುಖಂಡ ದಯಾನಂದ ಸಾಲೇಗಾಂವ, ಕಿಟ್ಟಿ ಸಾಲೇಗಾಂವ, ಮುತ್ತಣ್ಣಾ ಜಂಗಲೆ, ಲಕ್ಷ್ಮಣ ಝುಳಕಿಕರ್, ಅಜೆಯ ಸಿ.ಎಂ. ನಾಗರಾಜ ದೇವನೂರ, ಸುಧಾಕರ್ ಮೊದಲೆ, ಕೆಂಚಣ್ಣಾ ಝುಳಕಿಕರ್ ಅನೇಕರು ಭಾಗವಹಿಸಿದ್ದರು.

# ದಣಿದವರ ದಾಹ ನೀಗಿಸಲು ಡಾ.ಫಾರುಕ್ ಮಣ್ಣೂರ ಮಹತ್ವದ ಸೇವೆ



**ಶಹಾಬಾದ್: ಏ.20:**ಬೇಸಿಗೆ ತೀವ್ರವಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಶಹಾಬಾದ ನಗರಕ್ಕೆ ಆಗಮಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಮಣ್ಣೂರ ಮಲ್ಟಿಸ್ಪೇಷಾಲಿಟಿ ಆಸ್ಪತ್ರೆಯ ಮುಖ್ಯಸ್ಥ ಹಾಗೂ ಸಾಮಾಜ ಸೇವಕ ಡಾ. ಫಾರೂಕ್ ಮಣೂರ ಅವರು ಶಹಬಾದ ಪಟ್ಟಣದ ನಾಲ್ಕು ಕಡೆಗಳಲ್ಲಿ ಜನ ದಟ್ಟಣೆ ಇರುವ ಪ್ರದೇಶದಲ್ಲಿ ತಂಪಾದ ಶುದ್ಧ ಉಚಿತ ಕುಡಿಯುವ ನೀರಿನ ವ್ಯವಸ್ಥೆ ಮಾಡಿಸಿದ್ದಾರೆ.

ನೂತನ ಶುದ್ಧ ತಂಪು ಕುಡಿಯುವ ನೀರಿನ ಕೇಂದ್ರಗಳನ್ನು ಇಂದು ಶಹಾಬಾದ್ ಬಸ್ ನಿಲ್ದಾಣ, ಹಳೆ ಶಹಾಬಾದ್, ರಾಮ್ ಸರ್ಕಲ್ ಹಾಗೂ ಬಂಡಿ ಬಜಾರ್ ಪ್ರದೇಶಗಳಲ್ಲಿ ಡಾ. ಫಾರೂಕ್ ಮಣ್ಣೂರ ಉದ್ಘಾಟಿಸಿದ್ದರು.

ಈ ಸಂದರ್ಭದಲ್ಲಿ ಡಾ. ಫಾರುಕ್ ಮಣ್ಣೂರ ಮಾತನಾಡಿ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಉದ್ದೇಶದಿಂದ ಈ ವ್ಯವಸ್ಥೆ ಮಾಡಲಾಗಿದ್ದು, ನೀರು ಸರಬರಾಜಿಗಾಗಿ ಪ್ರತ್ಯೇಕ ವಾಹನ ವ್ಯವಸ್ಥೆ ಹಾಗೂ ನೀರಿನ ಕ್ಯಾನ್ಗಳನ್ನು ನಿರ್ವಹಿಸಲು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಬೇಸಿಗೆಯ ತಾಪಮಾನದಿಂದ ಬಳಲುತ್ತಿರುವ ಸಾರ್ವಜನಿಕರು, ಕಾರ್ಮಿಕರು, ಆಟೋ ಚಾಲಕರು , ರೈತರು, ಕೂಲಿಕಾರ್ಮಿಕರು, ರಸ್ತೆ ಬದಿ ವ್ಯಾಪಾರಿಗಳು ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೇಸಿಗೆ ಮುಗಿಯುವವರೆಗೆ ಈ ಸೇವೆಯನ್ನು ಮುಂದುವರಿಸಲಾಗುವುದು ಎಂದು ತಿಳಿಸಿದ್ದಾರೆ.

ನ್ಯಾಯವಾದಿ ಶರಣಬಸಪ್ಪ ಖೇಣಿ, ಅವರು ಮಾತನಾಡಿ ಡಾ. ಫಾರುಕ್ ಮಣ್ಣೂರ ಅವರು ಜಿಲ್ಲೆಯ 750 ಕ್ಷಯ ರೋಗಿಗಳಿಗೆ ದತ್ತು ಪಡೆದು ಪೌಷ್ಠಿಕ ಆಹರ ವಿತರಣೆ ಮಾಡಿದ್ದಾರೆ, ಕಲಬುರಗಿ ನಗರಾದ್ಯಂತ ಕಳೆದ 1 ವರ್ಷದಿಂದ ನಿರಂತರವಾಗಿ ಉಚಿತವಾಗಿ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಪೂರೈಸುತ್ತಿದ್ದಾರೆ, ಮಧುಮೇಹ ಮುಕ್ತ ಕಲಬುರಗಿ ಉದ್ದೇಶದಿಂದ ಉಚಿತವಾಗಿ ಮಧೂಮೇಹ ತಪಾಸಣೆ ಅಭೀಯಾನ ಹಮ್ಮಿಕೊಂಡಿದ್ದಾರೆ , ಕಲಬುರಗಿ ಜಿಲ್ಲೆಯ ಸುಮಾರು 360 ಬಡ ಹೇಣ್ಣುಮಕ್ಕಳಿಗೆ ಸುಕನ್ಯ ಸಮೃದ್ಧಿ ಯೋಜನೆ ಅಡಿಯಲ್ಲಿ ದತ್ತು ಪಡೆದು 18 ವರ್ಷಗಳ ವರೆಗೆ ಅವರ ಹಣದ ಕಂತ್ತನ್ನು ಅವರು ಪಾವತಿಸುತ್ತಿದ್ದಾರೆಸೇರಿಂದತೆ ಅನೇಕ ಸಮಾಜಿಕ ಕಾರ್ಯ ಅವರು ಮಾಡಿಕೊಂಡು ಬರುತ್ತಿದ್ದಾರೆ ಎಂದು ತಿಳಿಸಿದ್ದರು.

ಈ ಸಂದರ್ಭದಲ್ಲಿ ಗ್ರಾಮಸ್ಥರು ಡಾ. ಫಾರೂಕ್ ಮಣೂರ ಅವರಿಗೆ ಶಾಲು ಹೊದಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಕಲಬುರಗಿ ಡಿವೈಎಸ್ಪಿ ಲೋಕಾಯುಕ್ತ ಬಸವರಾಜ ಯಲಿಗಾರ, ವಾಜೀದ್ ಜಮಾದಾರ್, ಮಾಜಿ ಸಿಎಂಸಿ ಅಧ್ಯಕ್ಷ ರಫೀಕ್ ಕಾರೋಬಾರಿ, ಸಿ.ಎಂ.ಸಿ ಕೌನ್ಸಿಲರ್ ಎಸ್. ಕುಮಾರ್ , ಜಹೀರ್ ಅಹ್ಮದ್, ಹರೀಶ್ ಕಾರ್ಣಿಕ್, ಹರ್ಷಾ ಮಾಲಕ, ಹಾಗೂ ರಾಜೇಶ್ ಯನಗುಂಟಿಕರ್ .ಅಮೀರ ನಿಂಬಾಳಕರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು

ಬಿಸಿಲಿನ ತೀವ್ರತೆ ಹೆಚ್ಚಿದರಿಂದ ದಿನದೊಳಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಸೇವಿಸಬೇಕು. ಬೆಳಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ ನೇರ ಬಿಸಿಲಿನಲ್ಲಿ ಹೆಚ್ಚು ಕಾಲ ಇರುವುದನ್ನು ತಪ್ಪಿಸಬೇಕು. ಹಗುರವಾದ ಮತ್ತು ಹತ್ತಿಯ ಬಟ್ಟೆಗಳನ್ನು ಧರಿಸುವುದು ಸೂಕ್ತ. ಹೊರಗೆ ಹೋಗುವಾಗ ತಲೆ ಮುಚ್ಚಿಕೊಳ್ಳುವುದು, ನೆರಳಿನ ಸ್ಥಳದಲ್ಲಿ ವಿಶ್ರಾಂತಿ ಪಡೆಯುವುದು ಉತ್ತಮವಾಗಿದೆ. ತೀವ್ರ ತಲೆನೋವು, ತಲೆ ಸುತ್ತುವುದು, ವಾಂತಿ, ಮೂರ್ಚೆ ಅಥವಾ ಬೆವರು ಕಡಿಮೆಯಾಗುವುದು ಇತ್ಯಾದಿ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಸಮೀಪದಲ್ಲಿರುವ ವೈದ್ಯಕೀಯ ನೆರವು ಪಡೆಯುವುದು ಅಗತ್ಯ

ಡಾ. ಫಾರುಕ್ ಮಣ್ಣೂರ
ಮುಖ್ಯಸ್ಥರು ಮಣ್ಣೂರ ಮಲ್ಟಿಸ್ಪೇಷಾಲಿಟಿ ಆಸ್ಪತ್ರೆ ಕಲಬುರಗಿ

# ಗುರುವಿನ ಮಾರ್ಗದರ್ಶನದಿಂದ ವಿದ್ಯಾರ್ಥಿಗಳ ಜೀವನ ಸಾರ್ಥಕ : ರುದ್ರಮ್ಮ



**ಚಿಂಚೋಳಿ :ಏ.20:**ತಾಲೂಕಿನ ಕನಕಪೂರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಕನಕಪೂರ, 2000 ರಿಂದ 2007 ನೇ ಬ್ಯಾಚಿನ ವಿದ್ಯಾರ್ಥಿಗಳಿಂದ ಗುರುವಂದನ ಕಾರ್ಯಕ್ರಮ ಹಾಗೂ ಸ್ನೇಹಸಮ್ಮಿಲನ ಸಮಾರಂಭ ಕನಕಪೂರ ಗ್ರಾಮದ ಸರಕಾರಿ ಪ್ರೌಢ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು ಈ ಸಂದರ್ಭದಲ್ಲಿ ಶಿಕ್ಷಕರಾದ ರುದ್ರಮ್ಮ ಮಠಪತಿ ಮಾತನಾಡಿ ಗುರುವಿನ ಮಾರ್ಗದರ್ಶನದಿಂದ ವಿದ್ಯಾರ್ಥಿಗಳ ಜೀವನ ಸಾರ್ಥಕ, ಜೀವನದಲ್ಲಿ ಜಯ ವಿಫಲ ಇರುತ್ತದೆ, ಶರಣರ ಸಂತರ ನಡೆವಳಿಕೆ ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಜೀವನದಲ್ಲಿ ಯಶಸ್ವಿ ಆಗುತ್ತಿರಿ ಎಂದು ಕಿವಿ ಮಾತು ಹೇಳಿದರು ಪ್ರಾಥಮಿಕ ಶಿಕ್ಷಕರಾದ ಕಸ್ತೂರಿ ಬಾಯಿ, (ಭೂ ದಾನಿಗಳು )ಸಿದ್ದರಾಮಪ್ಪ, ಬಾಬು ರಾವ, ರುದ್ರಮ್ಮ, ಮಹಾದೇವಿ ಮೇತ್ರಿ, ಶೋಭಾ ಜಂಗಿ,ಸುಮಿತ್ರಾ ಬಾಯಿ ಪಟ್ಟನಾಯಕ, ವಿಟ್ಟಬಾಯಿ, ನರಸಿಂಗ್ ರಾಠೋಡ, ನಾರಾಯ್ಯ, ಅನೀಲಕುಮಾರ ಬಿರಾದಾರ, ಚಂದ್ರಕಲಾ, ಶೀಲಾ ದೇವಿ ಅಶೋಕ, ಸುರೇಶ ಕೊರವಿ, ಶಶೀಧರ ಗಯಕವಾಡ, ಮಹಾಲಿಂಗಪ್ಪ, ಅನಿತಾ, ವೇದಾ ಪ್ರೌಢ ಶಾಲೆಯ ಶಿಕ್ಷಕರು ಗುರುರಾಜ ಅಗ್ನಿ ಹೋತ್ರಿ, ಶರಣಬಸಪ್ಪ, ರಾಜಶೇಖರ, ಪ್ರಕಾಶ, ಕುಪೇಂದ್ರ, ದೇವಿದಾಸ ರಾಠೋಡ, ಸುರೇಶ ವಾಲಿಕರ, ಶ್ರೀರಂಗ ಜಾಧವ, ಮಾರುತಿ ಪತಾಂಗೆ, ಸಾಬೇರ್ ಖಾನ್.

ಪಂಚಯ್ಯ ಸ್ವಾಮಿ, ಜಗನ್ನಾಥ ಚಿತಕೊರ್, ನಾಗೇಂದ್ರಪ್ಪ ಕೊಂಡ, ಶೀವಲಿಲಾ, ವಿಶ್ವನಾಥ ಶೆಟ್ಟಿ, ನಾಗರಾಜ ಶೆಟ್ಟಿ, ಯಾಸ್ಮಿನ್ , ಅಶೋಕ, ಜಗನ್ನಾಥ ನಂದ, ವಿದ್ಯಾರ್ಥಿಗಳಾದ ಅಲಂಪ್ರಭು ಮಠಪತಿ, ಸಂತೋಷಿ ಕುಮಾರಿ, ಅನಂದ ದ್ಯಾಮಣಿ, ನಾಗವೇಣಿ, ವಿಜಯಕುಮಾರ, ಸತೀಶ್, ಸಿದ್ದಪ್ಪ, ಮಹಾದೇವಿ, ಮಂಜುಳಾ, ಜಗದೀಶ ಸೇಡಂ, ರಮೇಶ, ಕಲ್ಲಪ್ಪ, ರಾಜೇಶ್ವರಿ ಸಂಣ್ಣೂರ್, ಅಂಬ್ರೇಷ್, ಸುನೀಲ್, ಅಶ್ವಿನಿ, ಸೋಮಶೇಖರ್ ದ್ಯಾಮಣಿ, ಬಸವ ರಾಜೇಶ್ವರಿ, ಈರಮ್ಮ, ಅಂಬಿಕಾ, ವೀರೇಶ್ ಪಾರ , ಸಂಗಮೇಶ ಮಠಪತಿ, ತ್ರಿವೇಣಿ ಎಸ್ ಭದ್ರಶೆಟ್ಟಿ, ಇತರರು ಉಪಸ್ಥಿತರಿದ್ದರು ಕಾರ್ಯಕ್ರಮದ ನೆರೂಪಣೆ ಸಂಗೀತಾ ಮಠಪತಿ,ಮತ್ತು ಮಲ್ಲಯ್ಯ, ಅವರು ಮಾಡಿದರು

# ಬಸವ ಜಯಂತಿ ಆಚರಣೆ

**ಕಲ್ಬುರ್ಗಿ :ಏ.20:** ಸರ್ಕಾರಿ ಪಾಲಿಟೆಕ್ನಿಕ್ ಆಫ್ಜಲ್ಪುರ ಸಂಸ್ಥೆಯಲ್ಲಿ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ರವರ ಜಯಂತೋತ್ಸವ ಕಾರ್ಯಕ್ರಮವನ್ನು ಬಸವಣ್ಣರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಸಿ ನೆಡುವ ಮೂಲಕ ಆಚರಣೆ ಮಾಡಲಾಯಿತು. ಸಂಸ್ಥೆಯ ವಿದ್ಯಾರ್ಥಿ ಸಂಘದ ಪದಾಧಿಕಾರಿ ರಾಹುಲ್, ಬಸವಣ್ಣರವರ ಕುರಿತು ಭಾಷಣ ಮಾಡಿದರು. ಪ್ರಾಚಾರ್ಯರಾದ ಡಾ. ಪ್ರಭುದೇವ್ ಎಂ. ಎಸ್, ಮಾತನಾಡಿ ವಿಶ್ವಗುರು ಬಸವಣ್ಣನವರ ತತ್ವದರ್ಶಗಳನ್ನು ಅಳವಡಿಸಿಕೊಳ್ಳುವುದಲ್ಲದೆ, ಕಾಯಕ ಸಂಸ್ಕೃತಿ ಬೆಳೆಸಿಕೊಳ್ಳಬೇಕೆಂದು ಅಂದಾಗ ಮಾತ್ರ ಕಾಯಕವೇ ಕೈಲಾಸ ಎಂಬ ಬಸಣ್ಣನವರ ತತ್ವ ಅನುಷ್ಠಾನಗೊಳ್ಳುವುದು ಎಂದು ಹೇಳಿದರು. ಸರ್ವ ಪ್ರಯತ್ನ ಮಾಡಬೇಕೆಂದು ಹಿರಿಯ ಉಪನ್ಯಾಸಕರಾದ ಶ್ರೀ ಸುರೇಶ್



ಶೆಟ್ಟಿಗಾರ್, ವಿದ್ಯಾರ್ಥಿ ಸಂಘದ ಕ್ಷೇಮಾಭಿವೃದ್ಧಿ ಅಧಿಕಾರಿ ಶ್ರೀ ಚನ್ನವೀರಯ್ಯ, ವಿಜಯಕುಮಾರ್ ನೀಲಿಕಟ್ಟಿ ಹಾಗೂ ಕುಲಸಚಿವರಾದ ಶ್ರೀ ಶಿವಶರಣಪ್ಪ ಗೌರ್ ಇತರೆ ಸಿಬ್ಬಂದಿಗಳು ವಿದ್ಯಾರ್ಥಿಗಳು ಹಾಜರಾಗಿದ್ದರು

## ಬಾಗಲಕೋಟೆಯ ಕೂಡಲ ಸಂಗಮ ಕೇವಲ ಲಿಂಗೈಕ್ಯ ತಾಣವಾಗಿದೆ

# ಬಸವಣ್ಣನವರ ಆರಾಧ್ಯ ದೈವ, ಮನೆದೇವ್ರು ಯಾದಗಿರಿ ಜಿಲ್ಲೆಯ ವಡಗೇರಿಯ ಸಂಗಮದ ಸಂಗಮನಾಥ: ವೈಜನಾಥ ಹಿರೇಮಠ



ಧೈರ್ಯದ ದಾರಿ

ಯಾದಗಿರಿ: ಬಸವಣ್ಣನವರು ಅನೇಕ ಕ್ರಾಂತಿಕಾರಕ ಹೆಜ್ಜೆಗಳನ್ನು ಇರಿಸಿದ ಪ್ರಯುಕ್ತ ಕಲ್ಯಾಣದಲ್ಲಿ 12ನೇ ಶತಮಾನದಲ್ಲಿ ವಚನಗಳ ಕ್ರಾಂತಿಯಾಯಿತು, ಅಂದೇ ಸರ್ವೋತ್ತಮ ಸಮಾಜದ ಸಂಸತ್ತು ಅನುಭವ ಮಂಟಪ ರಚನೆ ಮಾಡಿದ ಕ್ರಾಂತಿಯಾಯಿತು. ಕೊನೆಗೆ ಮಾನವರೆಲ್ಲ ಒಂದೇ ಎಂಬ ಸಂದೇಶ ಸಾರುವ ಕಲ್ಯಾಣ ಕ್ರಾಂತಿಯಾಯಿತು ಎಂದು ಯಾದಗಿರಿ ಟೈಮ್ಸ್ ಸಂಪಾದಕ ವೈಜನಾಥ ಹಿರೇಮಠ ಅಭಿಪ್ರಾಯಪಟ್ಟರು.

ಅವರು ಇಲ್ಲಿಗೆ ಸಮೀಪದ ನೆರೆಯ ತೆಲಂಗಾಣ ರಾಜ್ಯದ ನಾರಾಯಣಪೇಟೆ ಜಿಲ್ಲೆಯ ಮಖ್ತಲ್ ತಾಲ್ಲೂಕಿನ ಮಾಗನೂರು ಮಂಡಲದ ವ್ಯಾಪ್ತಿಗೆ ಬರುವ ಉಜ್ಜೇಲಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ದಲ್ಲಿ ಗ್ರಾಮಸ್ಥರು ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಸತ್ಯ, ನ್ಯಾಯ, ಧರ್ಮ ಮಾರ್ಗದಲ್ಲಿ ಕಾಯಕ ಮಾಡಬೇಕು ಅಂದಾಗ ಮಾತ್ರ ಅಂತಹ ಕಾಯಕವೇ ಕೈಲಾಸವಾಗಿದೆ ಎಂದು ಹೇಳಿದ್ದಾರೆ ಎಂದು ತಿಳಿಸಿದರು.

ಕನ್ನಡ ನಾಡಿನ ಏಕೈಕ ಮೇರು ಸಾದೃಶ್ಯ ವ್ಯಕ್ತಿಯಾಗಿರುವ ಬಸವಣ್ಣನವರು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಮಹಿಳಾ ಸಮಾನತೆ ಮತ್ತು ಧಾರ್ಮಿಕ– ಸಾಮಾಜಿಕ ಚಿಂತನೆಯ ಸಂಸತ್ತು (ಅನುಭವ ಮಂಟಪ) ಸ್ಥಾಪನೆ ಸೇರಿದಂತೆ ಇಂತಹ ಸಾಧನೆ ಮಾಡಿದ ವಿಶ್ವದ ಏಕೈಕ ವ್ಯಕ್ತಿಯಾಗಿದ್ದಾರೆ ಇಂಥವರ ಹೆಸರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಡಬೇಕಾಗಿತ್ತು. ಆದರೆ ದುರದೃಷ್ಟವಶಾತ್ ಇವರ ಹೆಸರನ್ನು ಒಂದು ವಿವಿಗೆ ಇಡಲು ಬಿಡದಂತಹ ಕ್ಷುಲ್ಲಕ ಜನತೆ ನಮ್ಮ ರಾಜ್ಯದಲ್ಲಿಯೇ ಇರುವುದು ನೋವಿನ ಸಂಗತಿ ಎಂದರು.

ಬಸವಣ್ಣನವರು ಬಾಲ್ಯದಲ್ಲಿ ಶಿಕ್ಷಣ ಪಡೆದಿದ್ದು ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೂಡಲ ಸಂಗಮ ಅಲ್ಲ ಬದಲಿಗೆ ಯಾದಗಿರಿ ಜಿಲ್ಲೆ ವಡಗೇರಿ ತಾಲ್ಲೂಕಿನ ಸಂಗಮದಲ್ಲಿ ಎಂಬ ಸಂಗತಿ ಇತ್ತಿಚೆಗಷ್ಟೇ ಬೆಳಕಿಗೆ ಬಂದಿದ್ದು, ಇದನ್ನು ಸ್ವತಃ ನಡೆದಾಡುವ ದೇವರು ಎಂದೇ ಖ್ಯಾತರಾಗಿದ್ದ ತುಮಕೂರಿನ ಶ್ರೀ ಸಿದ್ದಗಂಗಾ ಶಿವಕುಮಾರ ಶ್ರೀಗಳು ತಾಮ್ರಪಟದಲ್ಲಿ ಬರೆದಿಟ್ಟಿದ್ದಾರೆ ಎಂದು ಇತಿಹಾಸಕಾರರು ಉಲ್ಲೇಖಿಸಿದ್ದನ್ನು ತಿಳಿಸುತ್ತಿರುವೆ ಎಂದು ಅವರು ಹೇಳಿದರು.

ಬಸವಣ್ಣನವರು ಬಾಲ್ಯ, ಶಿಕ್ಷಣ ಪಡೆದ ಸ್ಥಳ ವಡಗೇರಿ ತಾಲ್ಲೂಕಿನ ಕೂಡಲ ಸಂಗಮವೇ ಆಗಿದೆ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಕೂಡಲ ಸಂಗಮ ಕೇವಲ ಅವರು ಲಿಂಗೈಕ್ಯವಾದ ಸ್ಥಳವಾಗಿದೆ ಆದರೆ ಆ ಸ್ಥಳಕ್ಕೆ ಹೆಚ್ಚು ಪ್ರಚಾರ ಸಿಕ್ಕಿ ಅದನ್ನೇ ಸತ್ಯ ಎಂದು ನಂಬಿದ ಕಾರಣ ನಮ್ಮ ಜಿಲ್ಲೆಯ ಕೂಡಲ ಸಂಗಮಕ್ಕೆ ಪ್ರಾತಿನಿಧ್ಯ ಸಿಗದಂತಾಯಿತು. ಸಂಶೋಧಕರು ಈ ನಿಟ್ಟಿನಲ್ಲಿ ಇನ್ನು ಹೆಚ್ಚಿನ ಶೋಧ ಮಾಡಬೇಕಿದೆ ಎಂದು ನುಡಿದರು.

ಮರಿಕಲ್ ಪಟ್ಟಣದ ನಿವೃತ್ತ ಶಿಕ್ಷಕ ವೆಂಕಟರಾಮುಲು ಮಾತನಾಡಿ ಜಗಜ್ಯೋತಿ ಬಸವಣ್ಣನವರು ಉಪನಯನ ಸಂಸ್ಕಾರದ ಘಟನೆಯಿಂದಲೇ ಕ್ರಾಂತಿಕಾರಕ ನಿಲುವು ಕೈಗೊಂಡು ಮುಂದೆ ಜಗತ್ತಿಗೆ ಮಾದರಿಯಾಗುವಂತಹ ಅನುಭವ ಮಂಟಪವೆಂಬ ಮಾದರಿ ಸಂಸತ್ತು ರಚನೆ ಮಾಡಿದ ಶ್ರೇಷ್ಠ ಚಿಂತಕ ಎಂದು ಅವರು ಹೇಳಿದರು.

ತೆಲುಗಿನ ಖ್ಯಾತ ಕವಿಗಳಾದ ಕಂದುಕುರಿ ವೀರೇಶಲಿಂಗಂ, ಕುರಿಜಾಡ ಅಪ್ಪಾರಾವು, ಸುಂದರೇಶ್, ಹೇಮರಡ್ಡಿ ಮಲ್ಲಮ್ಮನ ಮೈದುನ ಯೋಗಿ ವೇಮನರ ಮೇಲೆ ಬಸವಣ್ಣನವರ ಪ್ರಭಾವವು ಆಗಿದ್ದು ಇವರೆಲ್ಲರ ಸಾಹಿತ್ಯದಲ್ಲಿಯೂ ಬಸವಣ್ಣನವರ ವಚನಗಳು ಢಾಳಾಗಿ ಪ್ರತಿಬಿಂಬಿಸಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಾಜಿ ಮಂಡಲ ಪಂಚಾಯಿತಿ ಅದ್ಯಕ್ಷ (ಎಕ್ಸ್ ಎಂಪಿಪಿ) ಶ್ರೀನಿವಾಸರೆಡ್ಡಿ, ಗ್ರಾಮದ ಮುಖಂಡರಾದ ಚಂದ್ರಾರೆಡ್ಡಿ, ಉಪ ಸರ್ಪಂಚ್ (ಗ್ರಾಪಂ ಉಪಾದ್ಯಕ್ಷ) ಎಂ ರಾಜು, ಗ್ರಾಮಸ್ಥರಾದ ಯಂಕಪ್ಪ, ಗ್ರಾಮ ಕಾಂಗ್ರೆಸ್ ಅಧ್ಯಕ್ಷ ಮೋನಪ್ಪ, ಮಲ್ಲೇಶ್, ಗುಡಿ ಅರ್ಚಕ ಅನಿಲ್ ಕುಮಾರ್ ಶರ್ಮಾ ಇನ್ನಿತರರು ಇದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE